4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯ

(ಅ) ಬಿ.ಎಂ.ಟಿ.ಸಿ. ಬಸ್ - ಕಾರ್ಮಿಕ ಮುಷ್ಕರ.

+ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಇದು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಇವತ್ತು ಪ್ರಸ್ತಾಪ ಮಾಡುತ್ತೀದ್ದೇನೆ ಮತ್ತು ಬೇರೆ ಮಾನ್ಯ ಸದಸ್ಯರು ಈಗಾಗಲೇ ಈ ವಿಷಯವನ್ನು ಗಮನ ಸೆಳೆಯುವ ಸೂಚನೆ ಮತ್ತು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿರುತ್ತಾರೆ.

> " On 13.3.1998, Friday, the employees of Banasavadi Depot of B.M.T.C. went abruptly on strike protesting against the management failure to obtain a bail for a B.M.T.C. driver who was arrested in connection with the fatal accident on Wednesday".

ಈ ಒಂದು ಆಧಾರದ ಮೇಲೆ ಇಡೀ ಬೆಂಗಳೂರು ನಗರದಲ್ಲಿ ಅಷ್ಟೇ ಅಲ್ಲ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿಯೂ ಕೂಡ ಇವತ್ತು ಸಾರ್ವಜನಿಕರಿಗೆ ಬಸ್ ಸ್ಟ್ರೈಕ್‌ನಿಂದ ತೊಂದರೆಯಾಗಿದೆ. ಕಾರ್ಮಿಕರು ಸ್ಟ್ರೈಕ್ ಮಾಡಿರುವುದಕ್ಕೆ ಇನ್ನೊಂದು ಕಾರಣ ಇದೆ ಎಂಬುದನ್ನು ನಾನು ಪತ್ರಿಕೆಯಲ್ಲಿ ಓದಿದ್ದೇನೆ. ಕೆಲವು ಕಾರ್ಮಿಕರು ನನ್ನ ಹತ್ತಿರ ಬಂದು ವಿವರವಾಗಿ ಹೇಳಿದ್ದಾರೆ. ನೆಗ್ಲಿಜೆನ್ಸಿಯಿಂದ ಅಪಘಾತವಾದರೆ ಆ ಹಣವನ್ನು ಅವರ ಸಂಬಳದಿಂದ ರಿಕವರಿ ಮಾಡುವಂತೆ ಹೈಕೋರ್ಟಿನ ಆದೇಶ ಏನಿದೆ ಆ ಆದೇಶದ ಪ್ರಕಾರ ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯವರು ರಿಕವರಿ ಮಾಡುವುದಕ್ಕೆ ಈಗಾಗಲೇ ಡೈರೆಕ್ಷನ್ ಕೊಟ್ಟಿದ್ದಾರೆ. ಈ ಡೈರೆಕ್ಷನ್ ಪ್ರಕಾರ ಅನೇಕ ಡಿಪೋಗಳಲ್ಲಿ ಕಾರ್ಮಿಕರನ್ನು ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಕರೆಸಿ, ಇಷ್ಟು ಫೆನಾಲ್ಟಿ ಹಾಕಬೇಕು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆಂದು ಇವತ್ತು ಅನೇಕ ಕಾರ್ಮಿಕರು ಬಂದು ನನ್ನ ಹತ್ತಿರ ಹೇಳಿದ್ದಾರೆ. ಈ ರೀತಿಯ ಪರಿಸ್ಥಿತಿ ಇರುವಾಗ ಸರ್ಕಾರದವರು ಮೂರು ದಿವಸದಿಂದ ಏಕೆ ಸುಮ್ಮನೆ ಇದ್ದಾರೆಯೋ ಗೊತ್ತಿಲ್ಲ ಮತ್ತು ಕಾರ್ಮಿಕರನ್ನು ಕರೆಸಿ ಮಾತನಾಡತಕ್ಕಂಥ ಪ್ರಯತ್ನವನ್ನೂ ಕೂಡ ಮಾಡಿಲ್ಲ. ಇವತ್ತು ಬಸ್ ಸ್ಟ್ರೈಕ್‌ನಿಂದ ಸಾರ್ವಜನಿಕರಿಗೆ ಒಂದು ಕಡೆ ತೊಂದರೆಯಾದರೆ, ವಿಶೇಷವಾಗಿ ಒಂದು ವರ್ಷ ಕಾಲ ಮಕ್ಕಳು ಅಭ್ಯಾಸ ಮಾಡಿ, ಇವತ್ತು ಎಸ್‌ಎಸ್‌ಎಲ್‌ಸಿ, ಪಿಯುಸಿ ಮತ್ತು ಸೆಂಟ್ರಲ್ ಎಕ್ಸಾಮಿನೇಷನ್ ಬೋರ್ಡ್ ಪರೀಕ್ಷೆಗಳಿಗೆ ಹೋಗುವ ಅನೇಕ ವಿದ್ಯಾರ್ಥಿಗಳಿಗೆ ಇದರಿಂದ ಬಹಳ ಅನಾನುಕೂಲವಾಗಿದೆ. ಸಾಕಷ್ಟು ಮಕ್ಕಳು ಪರೀಕ್ಷೆಗೆ ಹೋಗದೆ ಮನೆಯಲ್ಲಿಯೇ ಉಳಿಯತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಇವೆಲ್ಲಕ್ಕೂ ಕೆಎಸ್‌ಆರ್‌ಟಿಸಿ: ಸಂಸ್ಥೆಯವರೇ ಕಾರಣಕರ್ತರೆಂದು ನಾನು ಸ್ಪಷ್ಟವಾಗಿ ಹೇಳಬಹುದು. ಮಾರ್ಚ್, ಏಪ್ರಿಲ್‌ನಲ್ಲಿ ನೀವು ಇಂತಹ ಸ್ಟ್ರೈಕ್‌ಗಳನ್ನು ತಡೆಗಟ್ಟದೇ ಹೋದರೆ ಅಥವಾ ಕಾರ್ಮಿಕರ ಮನವೊಲಿಸಿ ಅವರ ಹೇಳಿಕೆ ಏನು ಇದೆ ಅಥವಾ ಅವರ ಅನಿಸಿಕೆ ಏನು ಇದೆ ಅದನ್ನು ತಾವು ಕೇಳಿ ಅವರಿಗೆ ಪರಿಹಾರ ಕೊಡದೇ ಹೋದರೆ, ಖಂಡಿತವಾಗಿ ನಿಮ್ಮಿಂದ, ಸಾರ್ವಜನಿಕರಿಗೆ ಅಷ್ಟೇ ಅಲ್ಲ, ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಮತ್ತು ಸರ್ಕಾರಿ ನೌಕರ ವರ್ಗದವರಿಗೆ, ವಿದ್ಯಾಭ್ಯಾಸ ಮಾಡತಕ್ಕಂಥ ಮಕ್ಕಳಿಗೂ ಇವತ್ತಿನ

ದಿವಸ ತೊಂದರೆಯಾಗುತ್ತದೆ. ಈ ತೊಂದರೆಗೆ ಸರ್ಕಾರ ಮತ್ತು ಕೆಎಸ್‌ಆರ್‌ಟಿಸಿ ಸಂಸ್ಥೆಯವರು ಕಾರಣಕರ್ತರು ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಒಂದು ದಿವಸ ಆಯಿತು, ಎರಡು ದಿವಸ ಆಯಿತು, ಇವತ್ತು ಮೂರನೇ ದಿವಸ ಕಂಟಿನ್ಯೂಯಸ್ ಆಗಿ ಅದೇ ರೀತಿ ಎಂದು ಹೇಳಿದರೆ ಆ ಕಡೆಗೆ ನಿಮ್ಮ ಗಮನವೇ ಇಲ್ಲ. ನಾವು ಮಾತನ್ನೇ ಆಡಿಸುವುದಿಲ್ಲ, ಅವರು ಏನು ಬೇಕಾದರೂ ಮಾಡಿಕೊಳ್ಳಲಿ ಎಂದು ಹೇಳಿದರೆ, ಖಂಡಿತವಾಗಿ ಇದರಿಂದ ನೀವು ಜನರಿಗೆ ನೀವಾಗಿಯೇ ತೊಂದರೆ ಕೊಡುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಹೇಳಬೇಕಾಗುತ್ತದೆ. ಒಂದು ಕಡೆ ನೀವು ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ನಿಮ್ಮ ಬಸ್ಸು ದರವನ್ನು ಏರಿಸಿರುತ್ತೀರಿ. ಈ ರಾಜ್ಯದ ಜನ ಎಷ್ಟು ಪ್ರಮಾಣದಲ್ಲಿ ಪ್ರತಿಭಟನೆ ಮಾಡಿ ಅದನ್ನು ನಿಲ್ಲಿಸಬಹುದಾಗಿತ್ತೋ ಆ ಪ್ರಮಾಣದಲ್ಲಿ ಪ್ರತಿಭಟನೆ ಆಗಲಿಲ್ಲ. ಅದಕ್ಕೆ ನೀವು ಬಚಾವಾದಿರಿ. ನೀವು ಏನು ತಿಳಿದುಕೊಂಡಿದ್ದೀರಿ ಎಂದರೆ, ನಾವು ಏನು ಮಾಡಿದರೂ ಅದು ನಡೆಯುತ್ತದೆ ಎನ್ನತಕ್ಕಂಥ ಮನಸ್ಸನ್ನು ಮಾಡಿಕೊಂಡು, ಅಂತಹ ತೀರ್ಮಾನ ತೆಗೆದುಕೊಂಡು ತಾವು ನಡೆಯುತ್ತಿದ್ದೀರಿ. ಇಲ್ಲದೇ ಹೋದರೆ, ನಿಮಗೆ ಸ್ವಲ್ಪವಾದರೂ ಮಾನವೀಯತೆ ಇದ್ದಿದ್ದರೆ ಇದನ್ನು ಬಗೆ ಹರಿಸುತ್ತಿದ್ದಿರಿ. ಒಂದು ಕಡೆ ನೀವು ಬಸ್ಸು ದರವನ್ನು ಮೂರು ಸಲ ಏರಿಸಿದಿರಿ. ಅದು ಒಂದು ಕಡೆ ಹತ್ತುಪಟ್ಟು ಇದ್ದದ್ದು ನೂರು ಪಟ್ಟು ಮಾಡತಕ್ಕಂಥಾದ್ದು, 50 ಪಟ್ಟು ಮಾಡತಕ್ಕಂಥಾದ್ದು, ಇದೆಲ್ಲಾ ಮಾಡಿದರೂ ಕೂಡ ಜನ ಸಹಿಸಿಕೊಂಡು ನಿಮ್ಮ ಬಸ್ಸುಗಳಲ್ಲೇ ಪ್ರಯಾಣ ಮಾಡತಕ್ಕಂಥ, ಪ್ರಯತ್ನ ಮಾಡಿದರೂ ಕೂಡ, ಇವತ್ತು ದುಡ್ಡು ಕೊಟ್ಟು ಹೋಗುವುದಕ್ಕೆ ತಯಾರಿದ್ದರೂ ಕೂಡ ಸರಿಯಾದಂಥ ವ್ಯವಸ್ಥೆ ಇಲ್ಲ. ಇನ್ನೊಂದು, ತಾವು ಹೇಳಿಕೆಯನ್ನು ಕೂಡ ಕೊಟ್ಟಿದ್ದೀರಿ. ಈ ಮ್ಯಾಕ್ಸಿಕ್ಯಾಬ್, ಪ್ರೈವೇಟ್ ಬಸಸ್, ಇವೆಲ್ಲವನ್ನೂ ಕೂಡ ಅರೇಂಜ್ ಮಾಡಿದ್ದೇವೆ, ಡ್ರೈವರ್‌ಗಳನ್ನು ಅರೇಂಜ್ ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಅವರೆಲ್ಲಾ ಎಲ್ಲಿದ್ದಾರೆ? ಒಬ್ಬರೂ ಇಲ್ಲ. ಇವತ್ತು ಅನೇಕ ಜನರು ಬಸ್ಸು ನಿಲ್ದಾಣ ಮತ್ತು ರೈಲ್ವೆಸ್ಟೇಷನ್‌ನಿಂದ ತಮ್ಮ ಊರುಗಳಿಗೆ ಹೋಗಬೇಕು ಎಂದರೆ, ಒಂದು ಬಸ್ಸು ಕೂಡ ಇಲ್ಲ. ಮತ್ತೆ ಬೇರೆ ಯಾವುದೇ ಪರ್ಯಾಯ ವ್ಯವಸ್ಥೆಯನ್ನು ಕೂಡ ನೀವು ಮಾಡಿಲ್ಲ. ಅಂದರೆ ಸರ್ಕಾರದ ಗಮನ ಇಲ್ಲ ಎನ್ನತಕ್ಕಂಥಾದ್ದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಹಾಗಾದರೆ ಮತ್ತೆ ಯಾವ ಕಡೆಗೆ ನಿಮ್ಮ ಗಮನ ಇದೆ? ಆಡಳಿತದ ಕಡೆಗೆ ಗಮನ ಇಲ್ಲ, ಸ್ಟ್ರೈಕ್ ಕಡೆಗೆ ಗಮನ ಇಲ್ಲ. ಜನರ ತೊಂದರೆ ಕಡೆಗೆ ನಿಮ್ಮ ಗಮನ ಇಲ್ಲ. ಮಕ್ಕಳು ಇವತ್ತು ವಿದ್ಯಾಭ್ಯಾಸ ಮಾಡಿ ಪರೀಕ್ಷೆಗೆ ಹೋಗುತ್ತಿದ್ದಾರೆ, ಅವರ ಕಷ್ಟನಷ್ಟದ ಬಗ್ಗೆ ಕೂಡ ತಮಗೆ ಅರಿವಿಲ್ಲ. ಅಂದರೆ ಯಾವುದರ ಬಗ್ಗೆ ನಿಮ್ಮ ಚಿಂತನೆ ಇದೆ ಎನ್ನತಕ್ಕಂಥಾದ್ದೇ ನನಗೆ ತಿಳಿಯುತ್ತಿಲ್ಲ. ಇಂತಹ ಒಂದು ಕೆಟ್ಟ ಪರಿಸ್ಥಿತಿಯಲ್ಲಿ ಇವತ್ತು ಕೆಎಸ್‌ಆರ್‌ಟಿಸಿ ಇದೆ. ಕೆ.ಎಸ್.ಆರ್.ಟಿ.ಸಿ. ಒಳ್ಳೆಯ ಕೆಲಸ ಮಾಡಲಿ ಎಂದು ಹೇಳಿ ತಾವು ಮೂರು-ನಾಲ್ಕು ಡಿಪೋಗಳನ್ನು ಮಾಡುತ್ತೇವೆ ಎಂದು ಹೇಳಿದಿರಿ. ಅದರ ಮಂಜೂರಾತಿಯನ್ನು ಕೂಡ ಪಡೆದಿರಿ. ಅದರ ವಿರುದ್ಧವಾಗಿ ಹೋರಾಟ ನಡೆಯಿತು. ಆದರೂ ಕೂಡ ನಿಮ್ಮಲ್ಲಿ ಸುಧಾರಣೆ ಇಲ್ಲ. ಒಂದಲ್ಲ, ಎರಡಲ್ಲ ಮೂರು ಡಿಪೋಗಳನ್ನು ಮಾಡಿದರೂ ಕೂಡ ಸುಧಾರಣೆ ಇಲ್ಲ. ಈಗ ಹುಬ್ಬಳ್ಳಿ ಡಿಪೋ ಬೇರೆ ಇದೆ. ಇಲ್ಲಿರತಕ್ಕಂಥ ಬಿಎಂಟಿಎಸ್ ಡಿಪೋ ಬೇರೆ. ಕೆ.ಎಸ್.ಆರ್.ಟಿ.ಸಿ. ಡಿಪೋ ಬೇರೆ. ಇಂಥಾದ್ದು ಎಲ್ಲಾ ವ್ಯವಸ್ಥೆ ಆದರೂ ಕೂಡ ಇವತ್ತು

ಸುಧಾರಣೆ ಆಗಲಿಲ್ಲ. ಅದಕ್ಕೆ ಯಾರು ಕಾರಣ? ಇದೆಲ್ಲಾ ಮಾಡಿಕೊಡಿ, ನಾನು ಬಹಳ ವ್ಯವಸ್ಥಿತವಾಗಿ ಮಾಡುತ್ತೇನೆ, ಕಂಟ್ರೋಲ್ ಇರುತ್ತದೆ, ಅಡ್ಮಿನಿಸ್ಟ್ರೇಷನ್ ಚೆನ್ನಾಗಿ ನಡೆಯುತ್ತದೆ ಎಂದು ಹೇಳಿದಿರಿ. ಅಡ್ಮಿನಿಸ್ಟ್ರೇಷನ್ ಏನಾಯಿತು? ಅದು ಉಲ್ಟಾ ಆಗಿ ಇವತ್ತು ಜನರಿಗೆ ತೊಂದರೆ ಕೊಡತಕ್ಕಂಥ ಅಡ್ಮಿನಿಸ್ಟ್ರೇಷನ್ ಕೊಡುತ್ತಿದ್ದೀರೇ ಹೊರತಾಗಿ ಜನರಿಗೆ ಸೌಲಭ್ಯಗಳನ್ನು ಕೊಡತಕ್ಕಂಥಾದ್ದು, ಸವಲತ್ತುಗಳನ್ನು ಮಾಡಿ ಕೊಡತಕ್ಕಂಥಾದ್ದು ಯಾವ ಕೆಲಸವೂ ಕೂಡ, ಯಾವ ಪ್ರಯತ್ನವೂ ಕೂಡ ನಿಮ್ಮಿಂದ ಆಗಲಿಲ್ಲ, ನಿಮ್ಮ ಸಂಸ್ಥೆಯಿಂದಲೂ ಆಗಲಿಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಇವತ್ತು ಜನರು ಏನು ತೊಂದರೆಗೆ ಈಡಾಗಿದ್ದಾರೆ, ವಿಶೇಷವಾಗಿ ಬೆಂಗಳೂರು ಜಿಲ್ಲೆಯಲ್ಲಿ, ಬೆಂಗಳೂರು ನಗರದಲ್ಲಿ, ಅವರಿಗೆ ಈ ಸ್ಟ್ರೈಕ್‌ನ್ನು ವಿತ್‌ಡ್ರಾ ಮಾಡುವುದಕ್ಕೆ ತಕ್ಷಣ ಕ್ರಮವನ್ನು ಜರುಗಿಸಬೇಕು. ಯಾವುದೇ ಒಂದು ನೆಪ ಹೇಳಿಕೊಂಡು ಅವರು ಮುಂದೆ ಹೋಗತಕ್ಕಂಥಾದ್ದು ಅಲ್ಲ. ಇವತ್ತು ಹೈಕೋರ್ಟಿನದ್ದು ಏನಾದರೂ ಡೈರೆಕ್ಷನ್ಸ್ ಬಂದಿದ್ದರೆ, ಲಾ ಡಿಪಾರ್ಟ್‌ಮೆಂಟ್ ಮತ್ತು ನೀವು ಸೇರಿ ಅದಕ್ಕೆ ಯಾವರೀತಿಯಾಗಿ ಒಂದು ಪರ್ಯಾಯ ಅಥವಾ ಆಲ್ಟರ್‌ನೇಟಿವ್ ಹುಡುಕತಕ್ಕಂಥ ಚಿಂತನೆಯನ್ನು ಮಾಡಬೇಕು. ನೆಗಡಿ ಬಂದಿದೆ ಅಥವಾ ಮೂಗಿನಲ್ಲಿ ಸಿಂಬಳ ಸೋರುತ್ತದೆ ಎಂದು ಹೇಳಿ ಮೂಗನ್ನು ಕೊಯ್ದುಕೊಳ್ಳುವುದಕ್ಕೆ ಆಗುತ್ತದೆಯೆ? ಆದ್ದರಿಂದ ಇದಕ್ಕೆ ಏನಾದರೂ ಔಷಧವನ್ನು ಹುಡುಕಲಿಲ್ಲವೆಂದರೆ, ನೀವು ಖಂಡಿತವಾಗಿ ಜನರಿಗೆ ನೀವಾಗಿಯೇ ತೊಂದರೆಯನ್ನು ಕೊಡುತಿದ್ದೀರಿ, ಹಿಂಸೆ ಕೊಡುತಿದ್ದೀರಿ ಎನ್ನತಕ್ಕಂಥ ಆಪಾದನೆಯನ್ನು ನಾನು ನೇರವಾಗಿ ಸರ್ಕಾರದ ಮೇಲೆ ಮಾಡುತ್ತೇನೆ. ಮತ್ತು ಸುಮಾರು ಮೂರು ದಿವಸಗಳಿಂದ ಈ ಸ್ಟ್ರೈಕ್ ನಡೆದರೂ ಕೂಡ ತಾವು ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ. ಅಥವಾ ನಡೆಯಲಿ ಎನ್ನುವ ಭಾವನೆ ಇದೆಯೋ ಏನೋ ನನಗೆ ಗೊತ್ತಿಲ್ಲ. ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ನಿಮ್ಮ ಎಲ್ಲಾ ಬೆಂಬಲ ಇದೆ ಎನ್ನತಕ್ಕಂಥ ಸಂಶಯ ಕೂಡ ಇವತ್ತು ನನಗೆ ಬರುತ್ತಾ ಇದೆ. ನಿಮಗೆ ಕಾಳಜಿ ಇದ್ದಿದ್ದರೆ, ಮಕ್ಕಳ ಮೇಲೆ ಪ್ರೀತಿ ಇದ್ದಿದ್ದರೆ ಅಥವಾ ಸಾಮಾನ್ಯ ಜನರ ಮೇಲೆ ಪ್ರೀತಿ ಇದ್ದಿದ್ದರೆ ಮೂರು ದಿವಸಗಳ ವರೆಗೆ ಈ ಸ್ಟ್ರೈಕ್‌ನ್ನು ಮುಂದುವರೆಸುವುದಕ್ಕೆ ನೀವು ಅವಕಾಶ ಮಾಡಿಕೊಡುತ್ತಿರಲಿಲ್ಲ. ಇದರ ಬಗ್ಗೆ ದಯವಿಟ್ಟು ತಮ್ಮ ಸ್ಪಷ್ಟವಾದಂಥ ನಿಲುವು, ತಮ್ಮ ಧೋರಣೆ ಏನು? ಮತ್ತು ಯಾವಾಗ ಈ ಸ್ಟ್ರೈಕ್‌ನ್ನು ಮುಕ್ತಾಯಮಾಡಿ ಮಕ್ಕಳಿಗೆ ಅನುಕೂಲ ಮಾಡಿಕೊಡುತ್ತೀರಿ, ಮತ್ತು ಈ ಅನಾನುಕೂಲತೆಗೆ ಕಾರಣೀಭೂತರಾದಂಥ ತಾವು ಇದಕ್ಕೆ ಏನು ಉತ್ತರವನ್ನು ಕೊಡುತ್ತೀರಿ ಎನ್ನತಕ್ಕಂಥಾದ್ದು ನಾನು ನಿರೀಕ್ಷೆ ಮಾಡುತ್ತೇನೆ.

+ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ):- ಸನ್ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಇಡೀ ವಿಶ್ವದಲ್ಲಿ ವಿಶ್ವ ಗ್ರಾಹಕರ ದಿನಾಚರಣೆ ಆಚರಿಸಿದರು. ಆದರೆ ನಮ್ಮ ರಾಜ್ಯದಲ್ಲಿ ಪ್ರಾಯಶಃ ಮುಖ್ಯಮಂತ್ರಿಯವರ ಫೋಟೋ ಇಟ್ಟುಕೊಂಡು ಭಾರಿ ಪ್ರಕಟಣೆಯೂ ಬಂತು, ಗ್ರಾಹಕರು ಯಾವ ರೀತಿ ಮುಖ್ಯ ಎಂದು. ಆದರೆ ಸಾರಿಗೆ ಇಲಾಖೆ ಮತ್ತು ಸಾರಿಗೆ ಸಿಬ್ಬಂದಿ ನಿನ್ನೆ ಗ್ರಾಹಕರ ಮೇಲೆ ನಡೆದುಕೊಂಡಂಥ ರೀತಿ, ಗ್ರಾಹಕರ ದಿನ ಮಾಡಬಾರದು ಎನ್ನುವುದಕ್ಕೆ ಬಹಳ ಉತ್ತಮ ಉದಾಹರಣೆಯಾಗಿದೆ. ಇದೇ ಸದನದಲ್ಲಿ ಸುಮಾರು ಒಂದು ವರ್ಷದ ಹಿಂದೆ, ಇದೇ ರೀತಿಯ ವಿಚಾರ ಬಂದಾಗ ಸಾರಿಗೆ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು

ಒಂದು ಮಾತನ್ನು ಹೇಳಿದ್ದರು. ನಾವು ಕರೆದು ಅವರ ಜೊತೆಗೆ ಮಾತನಾಡುತ್ತೇವೆ, ಮುಷ್ಕರವನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿದ್ದರು. ಅದು ಏನು ಮಾತುಕತೆಯಾಯಿತೋ ಇದುವರೆಗೂ ನಮಗೆ ಗೊತ್ತಿಲ್ಲ. ಇವತ್ತು ಮುಂಜಾನೆ ಕೆಲವು ಪಾಲಕರು ನನ್ನ ಹತ್ತಿರ ಬಂದಿದ್ದರು. ಇವತ್ತು ನಮ್ಮ ಮಕ್ಕಳ ಪರೀಕ್ಷೆ ಇದೆ, ಯಾವ ರೀತಿ ಅವರನ್ನು ಕಳುಹಿಸಬೇಕು ಎಂದು ತಮ್ಮ ಆತಂಕವನ್ನು ವ್ಯಕ್ತಪಡಿಸಿದರು. ಅವರು ಹೋದ ತಕ್ಷಣ ಒಂದಷ್ಟು ಬಾಲಕರು ಬಂದರು. ಅಂಕಲ್ ಇವತ್ತು ನಮಗೆ ಪರೀಕ್ಷೆ ಇದೆ, ನಾವು ಯಾವ ರೀತಿ ಹೋಗಬೇಕು ಎಂದು ಕೇಳಿದರು. ಬೆಂಗಳೂರಿನಲ್ಲಿ ನಾವು ಯಾವ್ಯಾವುದೋ ಶಾಲೆಗಳಿಗೆ ಮಕ್ಕಳನ್ನು ಸೇರಿಸಿಬಿಟ್ಟಿರುತ್ತೇವೆ. ಅವರು ಬಸ್ಸಿನಲ್ಲಿಯೇ ಶಾಲೆಗೆ ಹೋಗಬೇಕಾಗುತ್ತದೆ. ಇವತ್ತು ಬಸ್ಸು ಇಲ್ಲದಿದ್ದರೆ ಅವರು ಪರೀಕ್ಷೆಗೆ ಹೋಗುವ ಪರಿಸ್ಥಿತಿಯಲ್ಲಿ ಇಲ್ಲ. ಪ್ರಾಯಶಃ ನಮ್ಮ ನಾಡಿನ ಜನ ಈ ಟೆರರಿಸಮ್ ಅನ್ನು ಉಗ್ರಗಾಮಿ ಚಟುವಟಿಕೆಯನ್ನು ನೋಡಿಲ್ಲ. ಅದು ಪಂಜಾಬ್, ಆಸ್ಸಾಮ್, ತ್ರಿಪುರಾದಲ್ಲಿ ನಡೆಯುವುದನ್ನು ಬರೀ ಪೇಪರ್‌ನಲ್ಲಿ ಓದಿದ್ದೇವೆ, ಅಷ್ಟೆ. ಹೆಣ್ಣುಮಕ್ಕಳಿಗೆ ಮತ್ತು ಶಾಲಾಮಕ್ಕಳಿಗೆ ಇವತ್ತಿನ ಈ ಮುಷ್ಕರದಿಂದ ಇದು ಉಗ್ರಗಾಮಿ ಚಟುವಟಿಕೆನಾ ಅಂತ ಅನ್ನಿಸಿದರೆ ಪ್ರಾಯಶಃ ಆ ಹೆಣ್ಣುಮಕ್ಕಳದ್ದು ಮತ್ತು ಮಕ್ಕಳದ್ದು ತಪ್ಪಾಗಲಾರದು. It is nothing short of terrorism. ಯಾರ ಮೇಲೆ ಕೋಪ ತೋರಿಸಬೇಕು? ಇವತ್ತು ಹೈಕೋರ್ಟ್ ಏನೋ ಒಂದು ಆದೇಶವನ್ನು ಕೊಟ್ಟಿದೆ. ಹಾಗೆ ಆದೇಶವನ್ನು ಕೊಟ್ಟಾಗ ಅದಕ್ಕೆ ನಾಗರೀಕ ಬಲಿ ಆಗಬೇಕು. ಸಾರಿಗೆ ಇಲಾಖೆಯಲ್ಲಿ ಭ್ರಷ್ಟಾಚಾರ ಆದರೆ, ಸೋರಿಕೆ ಆದರೆ ಅದಕ್ಕೆ ನಾಗರೀಕ ಬಲಿಯಾಗಬೇಕೇನು? ಸಿಬ್ಬಂದಿ ಮತ್ತು ಆಡಳಿತ ವರ್ಗಕ್ಕೆ ಜಗಳವಾದರೆ ನಾಗರೀಕ ಇವತ್ತು ಬಲಿಯಾಗಬೇಕೇ? ಸನ್ಮಾನ್ಯ ಅಧ್ಯಕ್ಷರೇ, ಹಿಂದೆ ಬಿ.ಟಿ.ಎಸ್.ನ್ನು ಬಿ.ಎಂ.ಟಿ.ಎಸ್. ಮಾಡುತ್ತೇವೆ ಎಂದು ಹೇಳಿದರು. ಮೂರು ಲಕ್ಷ ಇರುವುದನ್ನು ನಾಲ್ಕು ಲಕ್ಷ ಮಾಡುತ್ತೇವೆ ಎಂದು ಹೇಳಿದರು. ಕೆಂಪು ಬಸ್ಸು ಬೇಡ, ನೀಲಿ ಬಸ್ಸು ಮಾಡುತ್ತೇವೆ ಎಂದರು. ಆದರೆ ಸೇವೆಯಲ್ಲಿ ಇವತ್ತು ಏನಾದರೂ ಬದಲಾವಣೆ, ಸುಧಾರಣೆ ಇದೆಯೇ? ಅದೇ ರೀತಿಯ ಸೇವೆ, ಅದೇ ರೀತಿಯ ದೌರ್ಜನ್ಯ. ಆ ಶಾಲಾಮಕ್ಕಳಿಗೆ ಇವತ್ತಿನ ದಿವಸ ಸ್ಟ್ರೈಕ್ ಮಾಡಿ ಏನು ಕಷ್ಟ ಕೊಡುತ್ತಿದ್ದಾರೋ ಬೇರೆ ಸಮಯದಲ್ಲಿ ಕೂಡ ಆ ಬಸ್ ಪಾಸ್ ಇಟ್ಟುಕೊಂಡು ಬಸ್ಸಿನಲ್ಲಿ ಹೋಗುವುದು ಬೆಂಗಳೂರು ನಗರ ಸಾರಿಗೆಯಲ್ಲಿ ಒಂದು ದೊಡ್ಡ ಶಾಪವಾಗಿದೆ. ಸನ್ಮಾನ್ಯ ಸಿಂಧ್ಯ ಅವರ ಬಗ್ಗೆ ನನ್ನ ಅನಿಸಿಕೆ ಏನೆಂದರೆ, ಅವರಿಗೆ, ಅವರ ರಾಜಕೀಯ ಜೀವನದಲ್ಲಿ ಅನೇಕರು ತೊಂದರೆ ಕೊಟ್ಟಿರಬಹುದು, ಬಯ್ದಿರಬಹುದು, ಬೇರೆ ಬೇರೆ ರೀತಿಯ ಅವಮಾನ ಮಾಡಿರಬಹುದು, ಮೈಯನ್ನೂ ಮುಟ್ಟಿರಬಹುದು. ಅವರ ಜೊತೆಯಲ್ಲಿ ಇವತ್ತು ನಗುನಗುತ್ತಾ ಮಾತನಾಡಿಕೊಂಡು ಪಾರ್ಟಿ ಮೀಟಿಂಗ್‌ನಲ್ಲಿ ಭಾಗವಹಿಸುತ್ತಿದ್ದಾರೆ. ನಿಮಗೆ ಮತ್ತು ಈ ಟ್ರೇಡ್ ಯೂನಿಯನ್ ಮಧ್ಯೆ ಏಕೆ ಇಷ್ಟೊಂದು ವಿರಸ ಬಂದಿದೆ? ಇವತ್ತು ಬೆಳಿಗ್ಗೆ ಆ ಯೂನಿಯನ್ ಲೀಡರ್ಸ್ ಬಂದಾಗ ನಾನು ಅವರಿಗೆ ಒಂದು ಮಾತು ಕೇಳಿದೆ, ಐವರಿ ಟವರ್‌ನಲ್ಲಿದ್ದು ಮಾತನಾಡುತ್ತಾರೆ ಎಂದು ಹೈಕೋರ್ಟ್ ಜಡ್ಜರನ್ನು ನೀವು ಬೈಯುತ್ತೀರಿ ಎಂದು. ಪ್ರಾಯಶಃ ನಮಗೂ ನಮ್ಮದೇ ಆದ ಅಭಿಪ್ರಾಯಗಳಿವೆ. ಇವತ್ತು ನೀವು ಎಲ್ಲೋ ಕುಳಿತುಕೊಂಡು ಸ್ಟ್ರೈಕ್ ಮಾಡಿ ಮಂಗಳೂರಿನ ಹತ್ತು ಹದಿನೈದು ಲಕ್ಷ ಜನರ ಮೇಲೆ ಈ ಒಂದು ಬರ್ಡನ್‌ನ್ನು ಹಾಕುತ್ತಿರುವುದು Are you not sitting in Ivory Tower? ನಿಮ್ಮ ಮನೆಗಳಿಗೆ ಬೆಳಿಗ್ಗೆ

ಹಾಲು ಬರಬೇಕು, ನಿಮ್ಮ ಮನೆಗೆ ಬೆಳಿಗ್ಗೆ ಪೇಪರ್ ಬರಬೇಕು. ಆದರೆ ನಾಗರೀಕರು ಮಾತ್ರ ನೀವು ಮಾಡುವ ಸ್ಟ್ರೈಕ್‌ನಿಂದ ಒದ್ದಾಡಬೇಕಾ ಎಂದು ನಾನು ಕೇಳಿದೆ. ಅವರು ಕೊನೆಗೆ ಒಂದು ಮಾತನ್ನು ಹೇಳಿದರು. ಸರ್ಕಾರ ನಮ್ಮ ಜೊತೆಗೆ ಮಾತನಾಡುತ್ತೇವೆ ಎನ್ನುವುದಕ್ಕೆ ಒಪ್ಪಿಕೊಂಡರೆ ನಾವು ಸ್ಟ್ರೈಕ್‌ನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ಕೂಡಲೇ ಸ್ಟ್ರೈಕ್‌ನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆ. ಆದರೆ ಅವರು ನಮ್ಮ ಜೊತೆಗೆ ಮಾತನಾಡುವುದಕ್ಕೇ ಸಿದ್ಧರಿಲ್ಲ. ಅವತ್ತು ನಿಮ್ಮ ಮಾತು ಕೇಳಿಕೊಂಡು ನಾವು ಮಾತನಾಡುತ್ತೇವೆ ಎಂದು ಅವರು ಸದನದಲ್ಲಿ ಹೇಳಿದ್ದರು. ಆದರೆ ಇದುವರೆಗೂ ಕೂಡ ಅವರು ನಮ್ಮ ಜೊತೆಯಲ್ಲಿ ಮಾತನಾಡಿಲ್ಲ ಎಂದು ಅವರು ಹೇಳುತ್ತಾರೆ. ಅದನ್ನು ನೀವು ಇವತ್ತು ಕ್ಲಾರಿಫೈ ಮಾಡಬೇಕು. ಹಿಂದೆ ಸದನದಲ್ಲಿ ಆಶ್ವಾಸನೆ ಕೊಟ್ಟಿದ್ದ ಪ್ರಕಾರ ನೀವು ಆ ಟ್ರೇಡ್ ಯೂನಿಯನ್‌ನವರನ್ನು ಕರೆದು ಮಾತನಾಡಿದ್ದೀರಾ? ಅವರ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೀರಾ ಎಂಬುದನ್ನು ಹೇಳಬೇಕು. ಸನ್ಮಾನ್ಯ ಅಧ್ಯಕ್ಷರೇ, ನನ್ನ ಮನಸ್ಸಿನಲ್ಲಿ ಕಳೆದ ನಾಲ್ಕು ದಿನಗಳಿಂದ ಅನ್ನಿಸುವುದು ಏನೆಂದರೆ, ಟ್ರೇಡ್ ಯೂನಿಯನ್, ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಇರುವುದು ಏತಕ್ಕೆ? ಅದು ನಾಗರೀಕರ ಪ್ರಯಾಣಕ್ಕೋಸ್ಕರ ಇದೆಯೋ ಅಥವಾ ಈ ಸಿಬ್ಬಂದಿ ಆಡಳಿತವರ್ಗದ ನಡುವೆ ಜಗಳಕ್ಕಿದೆಯೊ? We have seen great trade union veteran leaders. ಆದರೆ ನನಗೆ ಅನ್ನಿಸುತ್ತಾ ಇರುವುದು ಎಲ್ಲೋ ಒಂದು ಕಡೆ, Are we seeing only traders in Union today. ಆ ಯೂನಿಯನ್ ಚಟುವಟಿಕೆಯಿಂದ ನನಗೇನು ಲಾಭ ಎಂದು ಮಾತಾಡುತ್ತಿದ್ದಾರಾ? ಆಡಳಿತ ವರ್ಗಕ್ಕೆ ಒಂದಷ್ಟು ಕುಮ್ಮಕ್ಕು ಕೊಡುತ್ತಾ ಇದೆಯಾ? ನನ್ನ ಮನಸ್ಸಿನಲ್ಲಿ ಪ್ರಾಮಾಣಿಕ ಅನ್ನಿಸಿಕೆ ಇರುವುದು, ಸಾರ್ವಜನಿಕರಿಗೆ, ಅನೇಕ ಜನಪ್ರತಿನಿಧಿಗಳಿಗೆ ಅನ್ನಿಸಿದೆ.

11.40 ಎ.ಎಂ.

ಈ ಕೆ.ಎಸ್.ಆರ್.ಟಿ.ಸಿ. ಯನ್ನು ಖಾಸಗೀಕರಣ ಮಾಡಿದರೆ ಜನರಿಗೆ ಉಪಯೋಗ ಆಗಬಹುದಾ ಎಂದು. ಕೆ.ಎಸ್.ಆರ್.ಟಿ.ಸಿ. ಆಡಳಿತ ಕೂಡ ಇದಕ್ಕೆ ಕುಮ್ಮಕ್ಕು ಕೊಡುವ ರೀತಿಯಲ್ಲಿ, ಈ ಮುಷ್ಕರ ಮುಂದುವರೆದಷ್ಟು, ಆ ಭಾವನೆ ಇನ್ನಷ್ಟು ಗಟ್ಟಿಯಾಗುತ್ತದೆ ಎಂದು ಹೇಳಿ, ಈ ಕಾರ್ಮಿಕ ಸಿಬ್ಬಂದಿ ಏನು ಮುಷ್ಕರ ಮಾಡುತ್ತಿದ್ದಾರೆ, are they not playnig into the hands of administration and Management ಎಂದು ನನಗನಿಸುತ್ತಾ ಇದೆ. ಈ ಸಂದರ್ಭದಲ್ಲಿ ನಾನು ತಮ್ಮ ಮೂಲಕ ಕೇಳುವುದು, ಸಾರಿಗೆ ಇಲಾಖೆ ಒಂದು ಅಗತ್ಯ ಸೇವೆ. It is an essential service. ಅದರ ಮೇಲೆ ಇವತ್ತು ಡಿಪೆಂಡ್ ಆಗಿರುವವರು, ಅದರ ಮೇಲೆ ನಿಂತಿರುವವರು ಯಾರೂ ಸಹ ಬಂಡವಾಳಶಾಹಿಗಳಲ್ಲ. ಕೂಲಿ ಕಾರ್ಮಿಕರು, ಬೆಳಿಗ್ಗೆ ದಿನಗೂಲಿಗೆ ಹೋಗುವವರೂ ಕೂಡ ಬಸ್ಸನ್ನೇ ಆಶ್ರಯಿಸುವುದು; ಶಾಲಾ ಮಕ್ಕಳೂ ಆಶ್ರಯಿಸುವುದು. ಹಾಗಿದ್ದ ಮೇಲೆ, ಇದೊಂದು ಅಗತ್ಯ ಸೇವೆ ಇದೆಯೆಂದ ಮೇಲೆ, ಹಿಂದೆ ಇವರಲ್ಲಿ ಒಪ್ಪಂದವಾದಾಗ, ಮುನ್ಸೂಚನೆ ಕೊಡದೇ, ದಿಢೀರ್ ಮುಷ್ಕರ ಮಾಡುವುದಿಲ್ಲವೆಂಬ ಆಶ್ವಾಸನೆ ಕೊಟ್ಟಿದ್ದರು. ಈ ರೀತಿ ಇದ್ದಾಗ ಇಡೀ ಬೆಂಗಳೂರು ನಗರದವರನ್ನು ನಾವು ಸವಾರಿ ಮಾಡುತ್ತೇವೆ, ಬ್ಲಾಕ್‌ಮೇಲ್ ಮಾಡುತ್ತೇವೆ, " we will hold them for ransom" ಈ

ಒಂದು ಪ್ರವೃತ್ತಿಯನ್ನು ತಡೆಯಬೇಕು. ಇದು ಮತ್ತೆ ಮತ್ತೆ ಇದು 6 ತಿಂಗಳಿಗೆಗೊಂದುಸಾರಿ ಸದನದಲ್ಲಿ ಚರ್ಚೆಯಾಗುವುದು ನೀವೇನೋ ಮಾತನಾಡುತ್ತೇವೆನ್ನುವುದು, ವಾಪಸ್ ಹೋಗುವುದು. ಜನ ಇವತ್ತು ಆತಂಕದಿಂದ ಬೆಳಿಗ್ಗೆ ಹೋದವರು ಸಂಜೆ ಬಸ್ ಇದೆಯೇ ಎಂದು ಕೇಳುತ್ತಾರೆ. ಆ ರೀತಿ ಮುಷ್ಕರವನ್ನು ಮಾಡದೇ ಇರುವುದಕ್ಕೋಸ್ಕರ ಸರ್ಕಾರ ಒಂದು ಕಠಿಣವಾದ, ಒಂದು ಖಚಿತವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತದೆಯೇ? ಕಾರ್ಮಿಕರಿಗೆ ಏನು ಅನ್ಯಾಯವಾಗಿದೆ, ಅದನ್ನು ಪರಿಹಾರ ಮಾಡುವುದು, ನಿಮ್ಮ ಮತ್ತು ನಿಮ್ಮ ನಿಗಮದ ಕರ್ತವ್ಯ. ನಿಮ್ಮಿಬ್ಬರ ಜಗಳವನ್ನು ನಾಗರೀಕರ ಮೇಲೆ ಏಕೆ ಹೇರುತ್ತೀರಿ? ನಾಗರೀಕರನ್ನು ಬಡ ಕೂಸುಗಳ ತರಹ ಏಕೆ ಮಾಡುತ್ತೀರಿ. ಈ ಸಂದರ್ಭದಲ್ಲಿ ತಾವು ಕೂಡಲೇ ಆ ಬಿಎಂಟಿಸಿ ಯವರ ಮುಷ್ಕರ ಏನಿದೆ, ಅದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು. ಬೆಂಗಳೂರು ನಗರದ ನಾಗರೀಕರು 2-3-4 ಪಟ್ಟು ಆಟೋರಿಕ್ಷಾ ಚಾರ್ಜ್ ಕೊಟ್ಟು ಓಡಾಡುವಷ್ಟು ಶ್ರೀಮಂತರಲ್ಲ. ನಿಮ್ಮ ಸರ್ಕಾರ ಬಂದಮೇಲೆ, ಅವರು ಶ್ರೀಮಂತರಾಗಲಿಲ್ಲ. ಹೀಗಿರುವಾಗ, ಆ ಬಸ್ಸುಗಳು ಓಡಾಡುವುದಕ್ಕೆ, ಆ ಬಸ್ಸುಗಳಿಂದ ನಾಗರೀಕರಿಗೆ ಉಪಯೋಗವಾಗುವಂತೆ, ದೌರ್ಜನ್ಯ ಆಗದಹಾಗೆ ದಯವಿಟ್ಟು ಕ್ರಮ ತೆಗೆದುಕೊಳ್ಳಬೇಕು. ಅದು ನಾಗರೀಕರಿಗೆ ಮಾಡುವ ನಿಜವಾದ ಸೇವೆ ಎಂದು ಹೇಳಿ, ಮತ್ತೆ ನಿಮ್ಮಿಂದ ಆಶ್ವಾಸನೆ ಅಲ್ಲ, ಪರಿಹಾರ ಕ್ರಮವನ್ನು ನಾನು ಅಗ್ರಹಿಸುತ್ತಾ ಇದ್ದೇನೆ.

+ಶ್ರೀ ವಾಟಾಳ್ ನಾಗರಾಜ್: (ಚಾಮರಾಜನಗರ):- ಮಾನ್ಯ ಅಧ್ಯಕ್ಷರೇ, ಈ ಸಾರಿಗೆ ಸಂಸ್ಥೆಯು ಈ ಪರಿಸ್ಥಿತಿಗೆ ತಲುಪಬಾರದಾಗಿತ್ತು. ಇದು ನಮ್ಮೆಲ್ಲರಿಗೂ ಬಹಳ ನೋವಾಗಿದೆ. ಬೆಂಗಳೂರು ಮಹಾನಗರ ಪಾಲಿಕೆ ಸಿಬ್ಬಂದಿ ಮುಷ್ಕರವನ್ನು ಆರಂಭ ಮಾಡಿದ್ದಾರೆ. ಬಹಳ ಪ್ರಾಮುಖ್ಯವಾಗಿ ಈ ರೀತಿ ಮುಷ್ಕರ ಆರಂಭ ಮಾಡುವುದಕ್ಕೆ ಮೂಲ ಉದ್ದೇಶ ಏನು? ಒಂದು, ನ್ಯಾಯಾಲಯದ ತೀರ್ಪು. ಸಾರಿಗೆ ಸಂಸ್ಥೆಯ ಚಾಲಕರು ಯಾವುದೇ ಅಪಘಾತ ಮಾಡಿದಾಗ, ನ್ಯಾಯಾಲಯದಲ್ಲಿ ಚಾಲಕ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಉಂಟಾಗುವ ನಷ್ಟಕ್ಕೆ ಹಾಗೂ ಹಾನಿಗೆ ಚಾಲಕನೇ ಹೊಣೆಗಾರನೆಂದು ನ್ಯಾಯಾಲಯ ತೀರ್ಪು ನೀಡಿದೆ. ನ್ಯಾಯಾಲಯ ಈ ತೀರ್ಪನ್ನು ನೀಡಬೇಕಾದರೆ, ಸಾರಿಗೆ ಸಂಸ್ಥೆಯ ವ್ಯವಸ್ಥಾಪಕ ಮಂಡಳಿ, ನ್ಯಾಯಾಲಯದಲ್ಲಿ ಪ್ರಾಮಾಣಿಕವಾಗಿ ವಾದ ಮಾಡಲಿಲ್ಲ. ಸ್ಪಷ್ಟವಾಗಿ ವಾದ ಮಾಡಬೇಕಾದಂಥ ಸರ್ಕಾರಿ ವಕೀಲರುಗಳು, ಸಾರಿಗೆ ಇಲಾಖೆಗೆ ಸಂಬಂಧಪಟ್ಟ ವಕೀಲರುಗಳು ನ್ಯಾಯಾಲಯದಲ್ಲಿ ವಾದ ಮಾಡಿದ್ದರೆ, ಈ ತೀರ್ಪು ಬರುತ್ತಿರಲಿಲ್ಲವೆಂದು ನಾನಂದುಕೊಂಡಿದ್ದೇನೆ. ನ್ಯಾಯಾಲಯದಲ್ಲಿ ಒಂದು ತೀರ್ಪು ಬಂದಿತ್ತು, ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಾರಿಗೆ ಸಂಸ್ಥೆಯ ಚಾಲಕರು, ಅಪಘಾತ ಮಾಡಿದಾಗ, ನ್ಯಾಯಾಲಯದಲ್ಲಿ ಚಾಲಕ ತಪ್ಪಿತಸ್ಥನೆಂದು ಕಂಡುಬಂದಲ್ಲಿ ಉಂಟಾಗುವ ನಷ್ಟಕ್ಕೆ ಹಾಗೂ ಹಾನಿಗೆ ಚಾಲಕರೇ ಹೊಣೆಗಾರರೆಂದು ನ್ಯಾಯಾಲಯ ತೀರ್ಪು ನೀಡಿದೆ. ಈ ತೀರ್ಪು, ಈ ಪರಿಸ್ಥಿತಿಯಲ್ಲಿ ಬರಬೇಕಾದರೆ, ಕಾರ್ಮಿಕರ ಪರವಾಗಿ ವಾದ ಸರಿಯಾಗಿ ನಡೆದಿಲ್ಲ.

ಅಧ್ಯಕ್ಷರು:- ಜಡ್ಜಮೆಂಟ್ ಬಗ್ಗೆ ನೀವೇನೂ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಅದರ ಬಗ್ಗೆ ನಾನು ಹೇಳುತ್ತಿಲ್ಲ. ಅವರು ಕೊಟ್ಟಿರತಕ್ಕ ಜಡ್ಜಮೆಂಟ್ ಸರಿಯಿಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಾನು ತಮಗೇನು ಹೇಳುತ್ತೇನೆಂದರೆ, ಈ ಬಗ್ಗೆ ಮೇಲ್ಮನವಿಯನ್ನು ಸಲ್ಲಿಸಬೇಕಲ್ಲಾ. ಮೇಲ್ಮನವಿ ಸಲ್ಲಿಸುವುದಕ್ಕೆ ಅವಕಾಶಗಳಿವೆ. ಮೇಲ್ಮನವಿ ಸಲ್ಲಿಸುವುದಕ್ಕೆ ಸಾರಿಗೆ ಸಂಸ್ಥೆ ಇದುವರೆಗೂ ಪ್ರಾಮಾಣಿಕವಾದ ಪ್ರಯತ್ನ ಮಾಡಲಿಲ್ಲ. ಈ ಸಾರಿಗೆ ಸಂಸ್ಥೆಗೂ ಮತ್ತು ಸರ್ಕಾರಕ್ಕೂ ಅಂದರೆ ಸಾರಿಗೆ ಸಚಿವರಾದ ಸಿಂಧ್ಯರವರಿಗೂ ಒಂದು ರೀತಿಯಲ್ಲಿ ವೈಯಕ್ತಿಕವಾದ ಮಟ್ಟಕ್ಕೆ ಇದು ಬಂದು ತಲುಪಿದೆ. ಕಾರ್ಮಿಕರು ತಮ್ಮದೇ ಆದಂಥ ಧೋರಣೆಯಲ್ಲಿ, ಅವರು ಆ ಧೋರಣೆಯನ್ನು ಬಿಟ್ಟುಕೊಡುತ್ತಾ ಇಲ್ಲ. ಮತ್ತು ಸರ್ಕಾರ ಸ್ವಲ್ಪ ಹಿಂದೆ ಸರಿದು, ಸರ್ಕಾರ ಎಂದು ಹೇಳತಕ್ಕಂಥವರು ಕಾರ್ಮಿಕರ ಬಗ್ಗೆ ಅಷ್ಟು ಕಠಿಣವಾಗಬಾರದು. ಕಾರ್ಮಿಕರು ತಮ್ಮ ಬೇಡಿಕೆಗಳ ಬಗ್ಗೆ ಹೋರಾಟ ಮಾಡುವಾಗ, ಉಪಯೋಗಿಸತಕ್ಕ ಭಾಷೆಗಳು, ನಡೆಸತಕ್ಕ ಚಳುವಳಿಗಳು ಇದರಲ್ಲಿ ವ್ಯತ್ಯಾಸ ಇರಬಹುದು. ನನಗೆ ನೋವಾದಾಗ, ಆ ನೋವನ್ನು ಅನುಭವಿಸತಕ್ಕ ವ್ಯಕ್ತಿ ಬಳಸುವ ಭಾಷೆ ಸ್ವಲ್ಪ ವ್ಯತ್ಯಾಸ ಇರಬಹುದು. ಅದರ ಬಗ್ಗೆ ವಾದ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಚಿವರಾದಂಥವರು ಇವೆಲ್ಲವನ್ನೂ ಬದಿಗೊತ್ತಿ ರಾಜ್ಯದ ಹಿತದೃಷ್ಟಿಯಿಂದ, ನಾಗರೀಕರ ಹಿತದೃಷ್ಟಿಯಿಂದ ಮತ್ತು ಸಾರಿಗೆ ಸಂಸ್ಥೆಯ ಹಿತದೃಷ್ಟಿಯಿಂದ ಅವರನ್ನು ಕರೆದು ಮಾತುಕತೆಯಾಡಬೇಕಾಗಿದೆ. ನಾವು ಯಾವುದಾದರೊಂದು ರೀತಿಗೆ ತಲುಪೋಣ. ಇದನ್ನು ಸರಿಪಡಿಸತಕ್ಕಂಥ ವಾದಕ್ಕೆ ಇಳಿದಿದ್ದರೆ, ಈ ಪರಿಸ್ಥಿತಿ ನಿರ್ಮಾಣವಾಗುತ್ತಾ ಇರಲಿಲ್ಲವೆಂಬ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ. ಈ ಸಾರಿಗೆ ಸಂಸ್ಥೆಗೂ ಮತ್ತು ಕಾರ್ಮಿಕರಿಗೂ 1978ರಲ್ಲಿ ಒಂದು ಕರಾರು ಆಗಿರುತ್ತದೆ. ಅಪಘಾತ ಮಾಡಿದಂಥ ಚಾಲಕರನ್ನು ಬಂಧಿಸಿದರೆ, ಅವರನ್ನು ಬಿಡುಗಡೆ ಮಾಡಿಸಬೇಕಾದರೆ, ವ್ಯವಸ್ಥಾಪಕ ಮಂಡಳಿಯೇ ಜಾಮೀನು ಕೊಡಬೇಕೆಂದು ನೇರವಾಗಿ ಇದೆ. ಜಾಮೀನನ್ನು ಕೊಡಬೇಕಾದವರು ವ್ಯವಸ್ಥಾಪಕ ಮಂಡಳಿ, ಅಂದರೆ ಸಾರಿಗೆ ಸಂಸ್ಥೆ. ಇವತ್ತು ಬಂದಿರತಕ್ಕಂಥದ್ದು, ಈ ಜಾಮೀನು ಕೊಡುವ ಗೋಜಿಗೆ, ಆ ಅಗ್ರಿಮೆಂಟ್ ಆಗಿದ್ದರೂ, ಸಾರಿಗೆ ಸಂಸ್ಥೆಗೂ ಮತ್ತು ಕಾರ್ಮಿಕರಿಗೂ ಅಗ್ರಿಮೆಂಟ್ ಆಗಿದ್ದರೆ, ಆ ಅಗ್ರಿಮೆಂಟನ್ನು ಮುರಿದು ಅವರು ಜಾಮೀನು ಕೊಡಲಿಕ್ಕೆ ಬರಲಿಲ್ಲ. ಅಂದರೆ, ಕಾರ್ಮಿಕರ ರಕ್ಷಣೆ, ಕಾರ್ಮಿಕರ ಜೊತೆಯಲ್ಲಿ ಹೊಂದಾಣಿಕೆಯಾಗಿ, ಕಾರ್ಮಿಕರ ಜೊತೆಯಲ್ಲಿ ಒಂದು ಒಪ್ಪಂದಕ್ಕೆ ಬಂದು, ಆ ಒಪ್ಪಂದವನ್ನು ಸಾರಿಗೆ ಸಂಸ್ಥೆ ಮುರಿದುಹಾಕಿದೆ ಎಂಬುದು ಇವತ್ತು ಮೂಲಭೂತವಾಗಿ ಈ ಚಳುವಳಿಗೆ ಕಾಯಕಲ್ಪ ಸಿಕ್ಕಿದೆ. ಈ ಚಳುವಳಿ ಕೇವಲ ಬೆಂಗಳೂರು ಒಂದಲ್ಲ, ಇಡೀ ಕರ್ನಾಟಕದ ಅನೇಕ ಕಡೆ ಹಬ್ಬುತ್ತಾ ಇದೆ. ಒಂದು ರೀತಿ ಈ ಅಧಿಕಾರಿಗಳು, ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಮತ್ತು ಸಾರಿಗೆ ಸಂಸ್ಥೆಯ ಸಚಿವರು ಸ್ವಲ್ಪ ಸರಿದು, ಈ ಭಾವನೆಯನ್ನು ಕೋಪತಾಪದಲ್ಲಿ ತೀರ್ಮಾನ ಮಾಡಿಕೊಳ್ಳದೇ ಕಾರ್ಮಿಕರ ಬಗ್ಗೆ ಅತ್ಯಂತ ಪ್ರಾಮಾಣಿಕವಾಗಿ ಚಿಂತನೆ ಮಾಡಬೇಕೆಂದು ಹೇಳುತ್ತೇನೆ. ಇವರು ಮಾತುಕತೆಗೆ ಕರೆದಿದ್ದರೆ, ಈ ಸಮಸ್ಯೆ ಬಗೆಹರಿಯುತ್ತಿತ್ತು. ಒಂದು ಹಂತದಲ್ಲಿ, ಈ ಸದನದಲ್ಲಿ ಪ್ರಾರಂಭವಾದಾಗ, ಸಾರಿಗೆ ಸಂಸ್ಥೆಯ ಕಾರ್ಮಿಕ ಸಂಘದ ಅಧ್ಯಕ್ಷರಾದ ಅನಂತ ಸುಬ್ಬರಾಯರನ್ನು ಬಂಧನ ಮಾಡಿ ಬಳ್ಳಾರಿ ಜೈಲಿನಲ್ಲಿಟ್ಟಾಗ, ನಾವು ಸದನದಲ್ಲಿ ಆ ವಿಷಯವನ್ನು ಪ್ರಸ್ತಾಪ ಮಾಡಿದಾಗ, ಸರ್ಕಾರ ಏನು ಉತ್ತರ ಕೊಟ್ಟಿತು? ಮುಖ್ಯಮಂತ್ರಿಗಳು, ನಾವು ಕರೆದು ಮಾತುಕತೆ

ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸದನದಲ್ಲಿ ಕೊಟ್ಟಿದ್ದಾರೆ. ಇದುವರೆಗೂ ಆ ಭರವಸೆ ಈಡೇರಲಿಲ್ಲ. ಈ ಬಗ್ಗೆ ಅವರು ಮಾತನಾಡಲಿಲ್ಲ. ಕಾರ್ಮಿಕ ಮುಖಂಡರನ್ನು ಕರೆದು ನಿಮ್ಮ ಸಮಸ್ಯೆ ಏನು ಎಂದು ಕೇಳುವಷ್ಟು ಸೌಜನ್ಯವನ್ನು ಸಾರಿಗೆ ಸಚಿವರೂ ಮಾಡಲಿಲ್ಲ ಮತ್ತು ಮುಖ್ಯಮಂತ್ರಿಗಳೂ ಮಾಡಲಿಲ್ಲ. ಈ ಸದನದಲ್ಲಿ ಅವರು ಭರವಸೆ ಕೊಟ್ಟಿದ್ದರು. ಅದಾದ ನಂತರ, ಈ ಲೋಕಸಭಾ ಚುನಾವಣೆಗೆ ಮುಂಚೆ, ಅವರು ಕೆಲವು ಬೇಡಿಕೆಗಳನ್ನು ಇಟ್ಟರು. ನೀವು ನಮ್ಮ ಸಾರಿಗೆ ಸಂಸ್ಥೆಯನ್ನು ಕಡೆಗಾಣಿಸಿದ್ದೀರಿ, ಕಾರ್ಮಿಕರನ್ನು ಹೊರಗೆ ಹಾಕಿದ್ದೀರಿ. ನಾವು ಚುನಾವಣೆಯಲ್ಲಿ ನಿಮಗೆ ಬೆಂಬಲ ಕೊಡುವುದಿಲ್ಲವೆಂಬ ರಾಜಕೀಯ ನಿರ್ಧಾರವನ್ನು ಮಾಡುವುದು ನಡೆಯಿತು. ಆಗ ಹೊರಗಡೆ ಒಂದು ಒಪ್ಪಂದವಾಯಿತು. ಒಪ್ಪಂದ ಎಂದರೆ ಮಾತುಕತೆ. ಉಪ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒಂದು ಹೇಳಿಕೆ ಕೊಟ್ಟರು. ಏನು ಹೇಳಿದರೆಂದರೆ, ನಾನು ಕರೆದು ಮಾತುಕತೆ ಮಾಡುತ್ತೇನೆ ನೀವು ರಾಜಕೀಯವಾಗಿ ನಮ್ಮ ಜೊತೆ ಇರಬೇಕೆಂಬ ಹೇಳಿಕೆ ಕೊಟ್ಟರು. ಇದುವರೆಗೆ ಉಪ ಮುಖ್ಯಮಂತ್ರಿಗಳು ಕೂಡ ಅವರನ್ನು ಕರೆದು ಮಾತನಾಡಲಿಲ್ಲ. ಒಂದು ಹಂತದಲ್ಲಿ ಈ ಪರಿಸ್ಥಿತಿ, ಇದು ಮೋಡ ಕವಿದ ವಾತಾವರಣವಾಗಿದೆ. ನಾನು ಮಾನ್ಯ ಸಾರಿಗೆ ಸಚಿವರಿಗೆ ಹೇಳುತ್ತೇನೆ. ಹಳೆಯದನ್ನೆಲ್ಲಾ ಮರೆತು, ಹೊಸ ಅಧ್ಯಾಯವನ್ನು ಪ್ರಾರಂಭ ಮಾಡುವುದಕ್ಕೆ ಕೂಡಲೇ ಅವರನ್ನು ಕರೆದು ಮಾತನಾಡಿ. ನಾನು ನಿಮಗೆ ಏನು ಸಹಕಾರ ಬೇಕೋ ಅದನ್ನು ಪ್ರಾಮಾಣಿಕವಾಗಿ ಕೊಡುತ್ತೇನೆ. ಈ ವಿಚಾರದಲ್ಲಿ ಬಹಳ ದೂರ ಹೋಗುವುದು ಬೇಡ. ಇದನ್ನು ಒಂದು ಹಂತದಲ್ಲಿ ಕುಳಿತು ಮಾತನಾಡಿ, ಬಗೆಹರಿಸತಕ್ಕಂಥ ತೀರ್ಮಾನ ಮಾಡಬೇಕು. ಮೊದಲನೇ ಹಂತ, ನೀವೇ ಅವರನ್ನು ಕರೆದು ಮಾತನಾಡಿದರೆ, ಆ ಕೋಪತಾಪ ಬಹಳ ಕಡಿಮೆಯಾಗುತ್ತದೆ. ಎರಡನೆಯದು, ನಾನು ಒಪ್ಪುವುದಿಲ್ಲ. ಕೆಲವರು ಇಲ್ಲಿ ಹೇಳಿದರು, ಅವರು ನಾಗರೀಕರನ್ನು ಬ್ಲಾಕ್‌ಮೇಲ್ ಮಾಡುತ್ತಾರೆ ಎಂದು, ಅವೆಲ್ಲಾ ಹೇಳುವುದಕ್ಕಾಗುವುದಿಲ್ಲ, ಬ್ಲಾಕ್‌ಮೇಲ್ ಎನ್ನುವ ಪದವನ್ನು ಅವರಿಗೆ ಉಪಯೋಗಿಸುವುದಕ್ಕಾಗುವುದಿಲ್ಲ. ಮತ್ತು ಕಾರ್ಮಿಕರು ಭಯೋತ್ಪಾದನೆ ಮಾಡುತ್ತಾರೆಂದು ಹೇಳಿದರು, ಅದನ್ನೂ ನಾನು ಒಪ್ಪುವುದಿಲ್ಲ. ಕಾರ್ಮಿಕರು ಭಯೋತ್ಪಾದನೆಯೂ ಮಾಡುವುದಿಲ್ಲ, ಬ್ಲಾಕ್‌ಮೇಲ್ ಕೂಡ ಮಾಡುವುದಿಲ್ಲ. ಈ ರಾಜ್ಯದಲ್ಲಿ ನಡೆದಿರತಕ್ಕಂಥ ಎಲ್ಲಾ ಕಾರ್ಮಿಕ ಸಂಘಟನೆಗಳೂ ಮಾಲೀಕರ ಮೇಲೆ ಹೋರಾಟ ಮಾಡತಕ್ಕಂಥದ್ದು ಇದ್ದದ್ದೇ. ಮತ್ತು ಮಾಲೀಕರು ಕಾರ್ಮಿಕರನ್ನು ಬ್ಲಾಕ್‌ಮೇಲ್ ಎಂದು ಕರೆಯುವುದೂ ಇದ್ದದ್ದೇ. ಆ ಪದವನ್ನು ನಾನಂತೂ ಕರೆಯುವುದಕ್ಕೆ ಹೋಗುವುದಿಲ್ಲ. ಕಾರ್ಮಿಕರ ಬೇಡಿಕೆಗಳ ಬಗ್ಗೆ ಮಾತನಾಡುವಾಗ, ನಾನು ಒಂದೇ ಒಂದು ಸಲಹೆ ಕೊಡುತ್ತಾ ಇದ್ದೇನೆ. ದಯಮಾಡಿ, ತಾವು ಕರೆದು ಮಾತನಾಡತಕ್ಕ ವಿಷಯವನ್ನು ಪ್ರಾಮಾಣಿಕವಾಗಿ ಇವತ್ತು ಸದನದಲ್ಲಿ ಪ್ರಕಟಿಸಬೇಕು. ಮತ್ತು 1978ರಲ್ಲಿ ಏನು ಒಪ್ಪಂದವಾಯಿತು, ಮಾಲೀಕ ವರ್ಗ, ಅವರ ಬಂಧನವಾದಾಗ ಜಾಮೀನು ಕೊಡಬೇಕೆಂಬ ಒಪ್ಪಂದ ಏನಾಗಿದೆ, ಅದನ್ನು ತಾವು ಮಾಡಬೇಕು. ಒಂದು ಕಡೆ, ಪ್ರತಿ ಸಾರಿ, ಹೆಜ್ಜೆ ಹೆಜ್ಜೆಗೂ ಈ ದರಗಳನ್ನು ಏರಿಸುತ್ತಿದ್ದಾರೆ. ಜನರ ಮೇಲೆ ಅನೇಕ ತೊಂದರೆಗಳಾಗಿದೆ. ನಿಜ, ನಾನು ಒಪ್ಪುತ್ತೇನೆ. ಜನರಿಗೆ ಆಗತಕ್ಕಂಥ ತೊಂದರೆಯನ್ನು ತಪ್ಪಿಸುವುದಕ್ಕೆ ಕಾರಣ ಯಾರು? ಸರ್ಕಾರ, ಅದಕ್ಕೆ ಕಾರ್ಮಿಕರೊಬ್ಬರನ್ನೇ ಹೊಣೆ ಮಾಡತಕ್ಕದ್ದಲ್ಲ. ನೇರವಾಗಿ ಸರ್ಕಾರ ನಡೆಸತಕ್ಕಂಥವರು,

ಈ ರಾಜ್ಯದ ಹೊಣೆಗಾರಿಕೆಯನ್ನು ಹೊತ್ತಿರತಕ್ಕಂಥವರು ಪ್ರಾಮಾಣಿಕವಾಗಿ ಮಾಡಬೇಕೆನ್ನುವುದು ಮತ್ತು ಪೂರ್ವಾಗ್ರಹ ಪೀಡಿತರಾಗಬಾರದು. ಪೂರ್ವಾಗ್ರಹ ಪೀಡಿತರಾದರೆ ಈ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಆದಕ್ಕಾಗಿ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತೇನೆ. ಮತ್ತೊಂದು ಕೊನೆಯದಾಗಿ, ಖಾಸಗಿ ವಾಹನಗಳನ್ನು ಬಿಟ್ಟಿದ್ದಾರೆ ಒಂದು ರೀತಿ ಹಗಲು ದರೋಡೆ ನಡೆಯುತ್ತಾ ಇದೆ. ಎಲ್ಲಿ ಎಷ್ಟು ದುಡ್ಡು ಕೊಡಬೇಕು, ಎಲ್ಲಿ ಟಿಕೆಟ್ ತೆಗೆದುಕೊಳ್ಳಬೇಕು, ಯಾರಿಗೆ ಹಣ ಕೊಡಬೇಕು, ಯಾವ ಸ್ಟೇಜ್‌ಗೆ ಹತ್ತಬೇಕು, ಕೇಳಿದಷ್ಟು ಕೊಡಬೇಕಾಗಿದೆ. ಅವನು ಚಿಲ್ಲರೆಯನ್ನು ಕೊಟ್ಟರೆ ಕೊಡುತ್ತಾನೆ ಇಲ್ಲವಾದರೆ ಇಲ್ಲ. ಜನ ಆತುರದಲ್ಲಿ ಕೊಡುತ್ತಾರೆ. ಬೆಂಗಳೂರು ನಗರದಲ್ಲಿ ಎಲ್ಲಿ ಹೋಗಬೇಕು, ಎಲ್ಲಿ ಬಸ್ಸುಗಳನ್ನು ಹತ್ತಬೇಕು, ಯಾವ ಬಸ್ಸುಗಳನ್ನು ಹತ್ತಬೇಕು ಎನ್ನುವ ಬಗ್ಗೆ ಕೆಲವು ಬಾರಿ ಒಂದು ರೀತಿಯ ಮುಜುಗರ ಕವಿದಂತಾಗುತ್ತದೆ. ಆದ್ದರಿಂದ ಖಾಸಗಿ ವಾಹನಗಳಿಗೆ ಬೆಂಬಲ ಕೊಡತಕ್ಕಂಥ ಸರ್ಕಾರದ ನೀತಿ ಒಳ್ಳೆಯದಲ್ಲ. ಈ ಖಾಸಗಿ ವಾಹನಗಳಿಗೆ ಬೆಂಬಲ ಕೊಡುವಂಥ ಕಾರ್ಮಿಕ ಸಂಘಟನೆಗಳನ್ನು ತುಳಿಯತಕ್ಕಂಥ ತಂತ್ರವೇ ಹೊರತು ಬೇರೆ ಮಾತಿಲ್ಲ. ಇವತ್ತು ಈ ಖಾಸಗಿ ವಾಹನಗಳಿಂದ ನಮಗೆ ಅನುಕೂಲ ಇರಬಹುದು. ನಾಳೆ, ಇವರು ನಮಗೆ ಯಮಪಾಶಗಳು ಆಗುವಂಥ ಪರಿಣಾಮವಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ನಾನು ಸರ್ಕಾರಕ್ಕೆ ಕಳಕಳಿಯ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರಕ್ಕೆ ಖಾಸಗಿ ವಾಹನಗಳಿಂದ ಬಹಳ ಎಚ್ಚರಿಕೆ ಇರಬೇಕು. ಇವತ್ತು ನಡೆಯುತ್ತಿರುವುದು ಹಗಲು ದರೋಡೆ. ಎಲ್ಲಿಗೆ ಹೋಗಬೇಕು, ಎಲ್ಲಿ ಹಣ ಕೊಡಬೇಕು ಎಂಬ ಯಾವ ವ್ಯವಸ್ಥೆ ಇಲ್ಲದೇ ಇರತಕ್ಕಂಥ ಪರಿಸ್ಥಿತಿಯಾಗಿದೆ. ಇದರಿಂದ ಹೆಣ್ಣು ಮಕ್ಕಳಿಗೆ ಮತ್ತು ನಾಗರೀಕರಿಗೆ ಅನೇಕ ವಿಧವಾದಂಥ ತೊಂದರೆಯಾಗಿದೆ. ಈ ಎಲ್ಲಕ್ಕೂ ಕಾರಣ ನೇರವಾಗಿ ನಾನು ಸರ್ಕಾರವನ್ನು ಹೊಣೆ ಮಾಡುತ್ತೇನೆ. ಈ ಚುನಾವಣೆಗೂ ಹೊಣೆ, ಇವರ ಚುನಾವಣೆಯ ಸೋಲಿಗೆ ಇದು ಒಂದು ಕಾರಣ. ಈ ಸಾರಿಗೆ ವ್ಯವಸ್ಥೆಯ ದಿವಾಳಿತನದಿಂದ, ಸಾರಿಗೆ ಅವ್ಯವಸ್ಥೆ, ಈ ಚುನಾವಣೆ ಕಾರಣ ಎನ್ನುವಂಥ ಮಾತನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಆ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನೂ ಕೂಡ ಸೆಳೆಯುತ್ತೇನೆ. ಹಿಂದೆ ಸಾರಿಗೆ ಸಂಸ್ಥೆ ಚಳುವಳಿ ಮಾಡಿದಾಗ ಅನಂತ ಸುಬ್ಬರಾಯರು ಚಳುವಳಿಯಲ್ಲಿ ಇದ್ದಾಗ ಅವರನ್ನು ಕರೆದು ಮಾತನಾಡಿ ಎಂದು ನಾನು ಕಳಕಳಿಯಿಂದ ಹೇಳಿದ್ದೆ. ಇದುವರೆಗೂ ಆ ಮಾತುಕತೆಯಾಗಿಲ್ಲವೆನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಾವು ಮುಖ್ಯವಾಗಿ ಇದನ್ನು ಪ್ರತಿಷ್ಠೆ ಪ್ರಶ್ನೆಯನ್ನಾಗಿ ಮಾಡಿಕೊಳ್ಳದೆ, 5 ನಿಮಿಷ ನಾವೂ ನಿಮ್ಮ ಜೊತೆಯಲ್ಲಿ ಇದ್ದಂತಿವೆ, ಈ ಸಮಸ್ಯೆ ಬಗೆಹರಿಯುತ್ತದೆಂದು ನಾನು ಹೇಳುತ್ತಿದ್ದೇನೆ. ದಯವಿಟ್ಟು ಈ ಬಗ್ಗೆ ಸಹಕಾರ ಮಾಡಬೇಕೆಂದು ಕಳಕಳಿ ಮನವಿ ಮಾಡಿಕೊಳ್ಳುತ್ತೇನೆ.

+ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೇ, ಮೂರು ದಿವಸಗಳಿಂದ ಬೆಂಗಳೂರು ನಗರದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ ಎನ್ನತಕ್ಕಂಥಾದ್ದನ್ನು ನಾನು ಇಲ್ಲಿ ವಿವರಿಸಬೇಕಾಗಿಲ್ಲ. ಲೋಕಸಭಾ ಚುನಾವಣೆಯ ನಂತರವಾದರೂ ಇವರು ಜನರ ಸಮಸ್ಯೆಗಳಿಗೆ ಸ್ಪಂಧಿಸುತ್ತಾರೆ ಎಂದು ಜನ ಯಾವ ರೀತಿ ಇದ್ದಾರೆ ಎನ್ನುವಂಥದ್ದನ್ನು ಲೋಕಸಭಾ ಚುನಾವಣೆಯಲ್ಲಿ ತೋರಿಸಿದ್ದಾರೆ. ಈಗಲಾದರೂ ಜನರ ಬಗ್ಗೆ ಸ್ವಲ್ಪ ಕಾಳಜಿ ವಹಿಸುತ್ತೀರಿ, ಸಾರ್ವಜನಿಕರ ಕುಂದುಕೊರತೆಗಳ ಬಗ್ಗೆ ಸ್ಪಂದಿಸುತ್ತೀರಿ ಎನ್ನತಕ್ಕಂಥ ನಿರೀಕ್ಷೆ ಮಾಡಿದ್ದೆ. ಆದರೆ

ಈ ಮೂರು ದಿವಸಗಳಿಂದ ಬಿ.ಟಿ.ಎಸ್. ಮುಷ್ಕರ ನೋಡಿದರೆ, ಆ ರೀತಿ ಕಾಳಜಿ ವಹಿಸತಕ್ಕಂಥದ್ದಾಗಲಿ, ಜನರ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥದ್ದಾಗಲಿ ಕಾಣದೆ, ಬಹುಶಃ ನನ್ನ ನಿರೀಕ್ಷೆ ಸುಳ್ಳಾಗಿದೆ. ಈಗ ಇರುವ ಪ್ರಶ್ನೆ ಇಷ್ಟೇ ಎಲ್ಲರೂ ಮಾತನಾಡಿದ್ದಾರೆ. ಅವರ ತಪ್ಪು, ಇವರ ತಪ್ಪು ಎಂದು ಹೇಳತಕ್ಕಂಥದ್ದನ್ನು ನಾನು ಕೂಡ ಒಪ್ಪುತ್ತೇನೆ. ದಿಢೀರ್ ಯಾವುದೇ ಮುನ್ಸೂಚನೆ ಕೊಡದೆ, ಅದು ಸಾರ್ವಜನಿಕ ಸೇವೆಯಲ್ಲಿರತಕ್ಕಂಥವರು ತಮ್ಮ ಕುಂದು ಕೊರತೆಗಳ ಬಗ್ಗೆ 4-5 ದಿವಸಗಳ ಮೊದಲು ಮುನ್ಸೂಚನೆ ಕೊಟ್ಟು, ಹೋರಾಟ ನಡೆಸಿದ್ದರೆ ಬಹುಶಃ ಏನಾದರೂ ಪ್ರಯೋಜನ ಆಗುತ್ತಿತ್ತೇನೋ. ಇವತ್ತು ಸರ್ಕಾರ ಮತ್ತು ಕಾರ್ಮಿಕರ ಮಧ್ಯೆ ಬಲಿಪಶುಗಳು ಆಗಿರತಕ್ಕಂಥವರು ಸಾರ್ವಜನಿಕರು, ಮತ್ತು ಶಾಲೆಯ ಮಕ್ಕಳು. ಇವತ್ತು ಇದಕ್ಕೆ ಮೊದಲನೆ ಅಪರಾಧಿ ಸ್ಥಾನದ ಜವಾಬ್ದಾರಿಯನ್ನು ಹೊರತಕ್ಕಂಥದ್ದು ಸರ್ಕಾರ. ಅದು ಕಾರ್ಮಿಕರು ಅಲ್ಲ. ಹಲವಾರು ಸಂದರ್ಭಗಳಲ್ಲಿ ಇಲ್ಲಿ ಕೆ.ಎಸ್.ಆರ್.ಟಿ.ಸಿ. ಬಗ್ಗೆ ಚರ್ಚೆಯಾಗಿದೆ. ಮಾತುಕತೆ ಮಾಡುತ್ತೇವೆಂದು ಹೇಳಿದರು, ಅದರ ಬಗ್ಗೆ ಮಾತುಕತೆ ಮಾಡಲಿಲ್ಲ. 1970ರ ಅಗ್ರಿಮೆಂಟ್‌ನ್ನು ಜಾರಿ ಮಾಡಲಿಲ್ಲ. ಈಗ ಅವರಿಗೆ ಒಂದು ಸಮಸ್ಯೆ ಏನಾಗಿದೆ ಕೋರ್ಟ್ ಒಂದು ತೀರ್ಪು ಕೊಟ್ಟಿದೆ, ಅದನ್ನು ನಾವು ಯಾರೂ ಇಲ್ಲಿ ಪ್ರಸ್ತಾಪ ಮಾಡುವಂತೆ ಇಲ್ಲ. ಆದರೆ, ಆ ಕೋರ್ಟ್ ಕೊಟ್ಟಿರತಕ್ಕಂಥ ತೀರ್ಪಿನ ಹಿನ್ನಲೆಯಲ್ಲಿ, ಇಂತಹ ಒಂದು ಸಮಸ್ಯೆಯಾಗಬಹುದು ಎಂದು ಹೇಳಿ ಸರ್ಕಾರ ಗಮನಿಸಿ, ಮೊದಲೇ ಕಾರ್ಮಿಕ ಸಂಘಟನೆಗಳನ್ನು ಕರೆದು ಮಾತುಕತೆ ಮಾಡಿ, ಇದನ್ನು ಯಾವರೀತಿ ಪರಿಷ್ಕರಿಸಬೇಕು. ಮೇಲ್ಮನವಿಯನ್ನು ಸಲ್ಲಿಸತಕ್ಕಂಥಾದ್ದು ಮತ್ತು ಪುನರ್ ವಿಮರ್ಶೆ ಮಾಡತಕ್ಕಂಥಾದ್ದನ್ನು ಸರ್ಕಾರ ಮಾಡಬೇಕಿತ್ತು. ಏನಾದರೂ ಕ್ರಮ ತೆಗೆದುಕೊಳ್ಳುವಂಥ ಜವಾಬ್ದಾರಿ ಸರ್ಕಾರದ್ದು ಇದೆ. ಆದರೆ, ಅದರ ಬಗ್ಗೆ ಸರ್ಕಾರ ಚಕಾರ ಎತ್ತಲಿಲ್ಲ. ಹಾಗಾಗಿ ಇವತ್ತು ಹಿಂದಿನ ಹಲವಾರು ಬೇಡಿಕೆಗಳನ್ನು, ಇದರ ಜೊತೆಗೆ ಸೇರಿಸಿ ಕೋರ್ಟ್ ಜಡ್ಜ್‌ಮೆಂಟ್ ಹಿನ್ನಲೆಯಲ್ಲಿ, ಅಪಘಾತ ಆದರೆ ಡ್ರೈವರನೇ ಹೊಣೆ ಮಾಡತಕ್ಕಂಥ ತೀರ್ಪು ಇದೆ. ಅದರ ನೆಪದಲ್ಲಿ, ಹಲವಾರು ಬೇಡಿಕೆಗಳನ್ನು ಇಟ್ಟು ಇವತ್ತು ಮುಷ್ಕರ ಮಾಡುತ್ತಿದ್ದಾರೆ. ಬಹುಶಃ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಸರ್ಕಾರ ಮತ್ತು ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಕಾರ್ಮಿಕ ಸಂಘಗಳು ಎರಡೂ ಕೂಡಿ ಇದನ್ನು ಬಗೆಹರಿಸಬೇಕಾಗಿದೆ. ಆದರೆ ಸರ್ಕಾರ ಇವತ್ತು ಏನು ಹೇಳುತ್ತದೆ ನಾವು ಪರ್ಯಾಯ ವ್ಯವಸ್ಥೆ ಮಾಡುತ್ತೇವೆ ಎಂದು, ಹಾಗಾಗಿ ನೀವು ಎಲ್ಲಾ ವಿಭಾಗಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡತ್ತಾ ಹೋಗಬಹುದು. ಫ್ಯಾಕ್ಟರಿಗಳಲ್ಲಿ ಮತ್ತು ಕೆ.ಎಸ್.ಆರ್.ಟಿ.ಸಿ.ಗಳಲ್ಲಿ ಮತ್ತು ಎಲ್ಲಿ ಬೇಕಾದರೂ ಮಾಡುತ್ತೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ, ಪಾರ್ಲಿಮೆಂಟರಿ ಪದ್ಧತಿಯಲ್ಲಿ ಮತ್ತು ಅಂಗಸಂಸ್ಥೆಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡುತ್ತಾ ಹೋಗುತ್ತೀರೆಂದು ಹೇಳಿದರೆ ನೀವು ಆ ಕಾರ್ಮಿಕರನ್ನು ಹೆದರಿಸುತ್ತಿದ್ದೀರಿ, ನೀವು ಇಲ್ಲದಿದ್ದರೆ ಏನಾಯಿತು ನಾವು ನಡೆಸಿಕೊಳ್ಳುತ್ತೇವೆ, ನೀವು ಮನೆಗೆ ಹೋಗಿ ಎನ್ನುವ ವಾದ ಎಂದು ನನಗನಿಸುತ್ತದೆ. ಅದನ್ನು ಪ್ರತಿಷ್ಠೆ ಪ್ರಶ್ನೆಯಾಗಿ ತೆಗೆದುಕೊಳ್ಳುತಕ್ಕಂಥಾದ್ದು ಮತ್ತು ಸಾರಿಗೆ ಸಚಿವರು ಇವತ್ತು ಏನೆಲ್ಲಾ ಹೇಳಬಹುದು, ಆದರೆ ಸಾರ್ವಜನಿಕರಿಗೆ ಇವತ್ತು ಸ್ಪಷ್ಟವಾಗಿ ಗೊತ್ತಾಗಿದೆ. you are prejudiced against the Union. ನೀವು ಒಪ್ಪುತ್ತೀರೋ, ನಾವು ಒಪ್ಪುತ್ತೇವೋ ಬಿಡುತ್ತೇವೆ ಎನ್ನತಕ್ಕಂಥ ಪ್ರಶ್ನೆ ಅಲ್ಲ. ಸಾರ್ವಜನಿಕರಿಗೆ ಮತ್ತು ಕಾರ್ಮಿಕ ವರ್ಗದವರಿಗೆ ಸ್ಪಷ್ಟವಾಗಿ

ಅದು ಗೊತ್ತಿದೆ. ನೀವು ಅವರ ಬಗ್ಗೆ ಪೂರ್ವಾಗ್ರಹ ಪೀಡಿತರಾಗಿದ್ದೀರಿ. ಹಾಗಾಗಿ ಇವತ್ತು ಕೆಎಸ್ಆರ್‌ಟಿಸಿ ಬಹಳಷ್ಟು ಸಮಸ್ಯೆಗಳನ್ನು ಎದಿರಿಸುತ್ತಿದೆ. ಕಾರ್ಮಿಕ ಸಂಘಟನೆಗಳು, ಮ್ಯಾನೇಜ್‌ಮೆಂಟ್ ಜೊತೆಗೆ ಸೌಹಾರ್ದಯುತವಾದ ಪರಿಸ್ಥಿತಿ ನಿರ್ಮಾಣವಾಗದೆ ಇರತಕ್ಕಂಥ ಕಾರಣಕ್ಕೋಸ್ಕರ ಬಂದಿದೆ ಎಂದು ಹೇಳತಕ್ಕಂಥದ್ದು ಸಾರ್ವಜನಿಕರಿಗೆ ಇವತ್ತು ಉದ್ಭವವಾಗಿದೆ. ಹಾಗಾದರೆ ನೀವು ಪೂರ್ವಾಗ್ರಹ ಚಿಂತನೆಯನ್ನು ಬಿಟ್ಟು, ಇವತ್ತು ಕಾರ್ಮಿಕರ ಹಿತರಕ್ಷಣೆ ನೋಡತಕ್ಕಂಥದ್ದು ಎಷ್ಟು ಸಾರ್ವಜನಿಕರ ಹಿತರಕ್ಷಣೆಯನ್ನು ನೋಡತಕ್ಕಂಥದ್ದು ಇವತ್ತು ಅಷ್ಟೇ ಪ್ರಮುಖವಾದುದ್ದಾಗಿದೆ. ಸಾರ್ವಜನಿಕರ ಸೇವೆಯಲ್ಲಿರತಕ್ಕಂಥ ಸಂಸ್ಥೆಗಳು ಸಾರ್ವಜನಿಕರ ಹಿತವನ್ನು ಗಮನಿಸಬೇಕಾಗುತ್ತದೆ. ಜವಾಬ್ದಾರಿ ಹಂತದಲ್ಲಿರತಕ್ಕ ಸರ್ಕಾರ ಸಾರ್ವಜನಿಕರ ಸಮಸ್ಯೆ ಬಂದಾಗ ಅದನ್ನು ತಕ್ಷಣ ಪರಿಹರಿಸುವ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಸರ್ಕಾರ ಇರುವುದೇ ಬರೀ ಆಡಳಿತ ಯಂತ್ರವನ್ನು ನಡೆಸಿಕೊಂಡು ಹೋಗತಕ್ಕಂಥದ್ದು ಅಷ್ಟೇ ಅಲ್ಲ. ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಹೇಳತಕ್ಕದ್ದು ಇಷ್ಟೆ, ಈ ಬಿಕ್ಕಟ್ಟಿಗೆ, ಈ ಸಮಸ್ಯೆ ಉದ್ಭವವಾಗುವುದಕ್ಕೆ ಮೊದಲನೇ ಕಾರಣ ಸರ್ಕಾರದ ಬೇಜವಾಬ್ದಾರಿತನ ಮತ್ತು ಕಾರ್ಮಿಕ ಸಂಘಟನೆಗಳನ್ನೂ ಕೂಡ ಪರಿಸ್ಥಿತಿಯ ವಾತಾವರಣವನ್ನು ಅರ್ಥ ಮಾಡಿಕೊಳ್ಳದೆ ಯಾವ ಸಂದರ್ಭದಲ್ಲಿ ಏನು ಮಾಡಬೇಕಾಗುತ್ತದೆ ಎಂಬುದನ್ನು ಆಲೋಚಿಸದೆ ಮತ್ತು ಮಾತುಕತೆ ಮಾಡದೆ ದಿಢೀರ್ ಹೋರಾಟಕ್ಕೆ ಹೋಗತಕ್ಕಂಥದ್ದು ಇದೂ ಕೂಡ ಸರಿಯಲ್ಲ. ಹಾಗಾಗಿ ಇವತ್ತು ಸರ್ಕಾರ ತಕ್ಷಣ ಮಾತಕತೆಗೆ ಕಾರ್ಮಿಕ ಸಂಘಟನೆಗಳನ್ನು ಕರೆದು, ಆ ಕೋರ್ಟ್ ತೀರ್ಪಿನ ಪುನರ್ ವಿಮರ್ಶೆ ಮಾಡಲಿಕ್ಕೆ ಮ್ಯಾನೇಜ್‌ಮೆಂಟ್ ಮುಂದೆ ನಿಂತು ಕೆಲಸ ಮಾಡಬೇಕು ಆ ಕೋರ್ಟ್ ಏನು ತೀರ್ಮಾನ ಕೊಡುತ್ತದೆ, ಅದು ಬೇರೆ ವಿಷಯ. ಕನಿಷ್ಟ ಅದರ ಜವಾಬ್ದಾರಿಯನ್ನು ಮಾಡಬೇಕಾಗುತ್ತದೆ. ಆ ಕರ್ತವ್ಯವನ್ನು ಮಾಡಿ ತಕ್ಷಣ ಕಾರ್ಮಿಕ ಸಂಘವನ್ನು ಮಾತುಕತೆಗೆ ಕರೆದು, ಇವತ್ತಿನ ದಿವಸ ಈ ಸಮಸ್ಯೆಯನ್ನು ಪರಿಹಾರಮಾಡಬೇಕು. ಅದನ್ನು ಪರಿಶೀಲನೆ ಮಾಡುತ್ತೇವೆ, ಪರಿಗಣನೆ ಮಾಡುತ್ತೇವೆಂದು ಹೇಳತಕ್ಕಂಥ ಪ್ರಶ್ನೆ ಅಲ್ಲ. ಮುಷ್ಕರ ಈಗಾಗಲೇ ಮೂರು ದಿವಸ ಮುಗಿದು ನಾಲ್ಕನೇ ದಿವಸಕ್ಕೆ ಕಾಲಿಟ್ಟಿದೆ. ಸಾರ್ವಜನಿಕರು ಬಹಳಷ್ಟು ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಆದರೂ ಕೂಡ ಕಾರ್ಮಿಕರಿಗೆ ಸಮಸ್ಯೆಯಾಗಿದೆ ಈ ದಿವಸವೇ ಪರಿಹಾರ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಸಾರಿಗೆ ಸಚಿವರು):- ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಬಹುಶಃ ನಮ್ಮ ವಿರೋಧಪಕ್ಷದ ನಾಯಕರುಗಳು ಯಾರು ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಸಾರಿಗೆ ಸಂಸ್ಥೆಯಲ್ಲಿ ಆಗುತ್ತಿರುವಂತಹ ವ್ಯವಹಾರಗಳ ಬಗ್ಗೆ, ಮತ್ತು ಅಲ್ಲಿ ನಡೆಯುತ್ತಿರುವಂತಹ ವಿಚಾರಗಳ ಬಗ್ಗೆ ಅವರಿಗೆ ಸರಿಯಾದ ಮಾಹಿತಿಯನ್ನು ಕೊಡುವುದರಲ್ಲಿ ನಾನು ವಿಫಲನಾಗಿದ್ದೇನೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಬಹುಶಃ ನಾನು ಇವರಿಗೆ ಸರಿಯಾದ ಮಾಹಿತಿಯನ್ನು ಕೊಟ್ಟಿದ್ದರೆ, ಇವರು ಈ ರೀತಿ ಹೇಳುತ್ತಿರಲಿಲ್ಲ ಎನ್ನುವ ಅಭಿಪ್ರಾಯ ನನಗೆ ಬರುತ್ತಿದೆ. ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಾಮಾಣಿಕವಾಗಿ ನಾನು ಹೇಳುತ್ತಿದ್ದೇನೆ, ಕಳೆದ ಎರಡು ವರ್ಷಗಳಲ್ಲಿ ಯಾವುದೇ ರೀತಿಯ ಪೂರ್ವಾಗ್ರಹಪೀಡಿತರಾಗದೇ ರಾಜ್ಯದಲ್ಲಿಯೇ, ನಮ್ಮ ರಾಷ್ಟ್ರದಲ್ಲಿಯೇ ಒಂದು ಉತ್ತಮವಾದ ಸಾರಿಗೆ ಸಂಸ್ಥೆಯನ್ನು ಮಾಡಬೇಕು ಎನ್ನುವಂತಹ ದೃಷ್ಟಿಯಿಂದ ಮತ್ತು ಅದಕ್ಕೆ

ಮಾನ್ಯ ಮುಖ್ಯಮಂತ್ರಿಗಳ ಸಂಪೂರ್ಣವಾಗಿರತಕ್ಕಂಥ ಸಹಕಾರ, ಹಣಕಾಸಿನ ಮಂತ್ರಿಗಳ ಸಹಕಾರ, ತಮ್ಮೆಲ್ಲರ ಸಹಕಾರದಿಂದಾಗಿ ನಮ್ಮ ಅಧಿಕಾರಿಗಳ ಮೂಲಕವಾಗಿ ನಾನು ಮಾಡಿದ್ದೇನೆ. ನಾನು ಇದನ್ನು ಏನೋ ಒಂದು ಪ್ರಿಸ್ಟೀಜ್ ಇಷ್ಯೂ ಆಗಿ ಮಾಡಿಕೊಳ್ಳಬೇಕು ಎನ್ನುವುದು ಇಲ್ಲ. ಏಕೆಂದರೆ ಟ್ರಾನ್ಸ್‌ಪೋರ್ಟ್ ಮಿನಿಷ್ಟರ್‌ಗೂ, ಟ್ರೇಡ್ ಯೂನಿಯನ್‌ಗೂ ಇರತಕ್ಕಂಥ ಒಂದು ಸಂಬಂಧ ಕಡಿದು ಬಿದ್ದು ಹೋಗಿರುವುದರಿಂದ, ಸೌಹಾರ್ದಯುತವಾದ ವಾತಾವರಣ ಇಲ್ಲದೇ ಇರುವುದರಿಂದ, ಇದು ಒಂದು ಪ್ರಿಸ್ಟೀಜ್ ಇಷ್ಯೂ ಆಗಿ ಸರ್ಕಾರ ಮಾಡಿ ಕೊಂಡಿರುವುದರಿಂದ ಇದೆಲ್ಲಾ ನಡೆಯುತ್ತಿದೆ ಎಂದು ಗೌರವಾನ್ವಿತ ಸದಸ್ಯರುಗಳು ಹೇಳಿದ್ದಾರೆ. ಅದು ಸರಿಯಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಸಾರ್ವಜನಿಕರ ಹಿತದೃಷ್ಟಿಯಿಂದ ಅತ್ಯಂತ ಪ್ರಾಮಾಣಿಕವಾದ ನೋವು ನಮಗೆ ಇದೆ. ರಾಜಕೀಯವಾಗಿ ನಮಗೆ ಇದರಿಂದ ತೊಂದರೆ ಸಹ ಆಗಿದೆ. ಎರಡು ಸಾರಿ ನಾವು ಬೆಲೆಗಳನ್ನು ಹೆಚ್ಚು ಮಾಡಿರುವುದರಿಂದಾಗಿ, ಆಡಳಿತ ಪಕ್ಷಕ್ಕೆ ತೊಂದರೆ ಆಗಿರತಕ್ಕಂಥಾದ್ದನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಆದರೆ ಸಾರ್ವಜನಿಕ ಉದ್ದಿಮೆಯಾಗಿರತಕ್ಕಂಥ ಈ ಸಂಸ್ಥೆಯನ್ನು ಸಮಾಜವಾದಿ ನಾಯಕರಾಗಿರತಕ್ಕಂಥ ಶ್ರೀಮಾನ್ ಪಟೇಲರ ಕಾಲದಲ್ಲಿ ಯಾವುದೇ ಕಾರಣದಿಂದ ಸಹ ಇದು ಖಾಸಗಿ ಆಗಬಾರದು ಎನ್ನುವ ದೃಷ್ಟಿಯಿಂದ ಪ್ರಪ್ರಥಮ ಬಾರಿಗೆ, ಸರ್ಕಾರದಿಂದ ಕಳೆದ 40 ವರ್ಷಗಳಲ್ಲಿ ಸಾರಿಗೆ ಸಂಸ್ಥೆಗೆ ಅನುದಾನವನ್ನು ಕೊಡುವಂಥಾದ್ದು ಇರಲಿಲ್ಲ. ಸುಮಾರು 35 ಕೋಟಿ ರೂಪಾಯಿಗಳನ್ನು ಅನುದಾನವಾಗಿ ಸಾರಿಗೆ ಸಂಸ್ಥೆಗೆ ಕೊಟ್ಟಿರತಕ್ಕಂಥಾದ್ದು ಇದೆ. ಅಷ್ಟೇ ಅಲ್ಲ ಕಳೆದ ಮೂರು ವರ್ಷಗಳ ಹಿಂದೆ ಸಾರಿಗೆ ಸಂಸ್ಥೆ ದಿವಾಳಿಯಾಗಿ, ಅಲ್ಲಿ ಇದ್ದಂತಹ ನೌಕರರಿಗೆ ಸಂಬಳ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಇರಲಿಲ್ಲ. ರಾಜಕೀಯವಾಗಿ ನಮಗೆ ತೊಂದರೆ ಆಗುತ್ತದೆ ಎನ್ನುವುದು ಗೊತ್ತಿದ್ದರೂ ಸಹ ನಾವು ಒಂದಲ್ಲ ಎರಡು ಸಾರಿ ಬೆಲೆಗಳನ್ನು ಜಾಸ್ತಿ ಮಾಡಿ ನಮ್ಮ ರಾಜಕೀಯ ಶಕ್ತಿಗೆ ನಾವೇ ಪೆಟ್ಟು ಹಾಕಿಕೊಂಡಿರತಕ್ಕಂಥ ಸಂದರ್ಭಗಳು ಇವೆ. ಸಾರ್ವಜನಿಕರ ಹಿತದೃಷ್ಟಿಯಿಂದ ಇದನ್ನು ಮಾಡಿದ್ದೇವೆ. ಆದರೆ ಮಾನ್ಯ ಅಧ್ಯಕ್ಷರೇ, ಅತ್ಯಂತ ದುರ್ದೈವದ ವಿಚಾರ ತಾವು ಏನು ಹೇಳಿದ್ದೀರಿ, ಕಳೆದ ವಿಧಾನ ಸಭಾ ಅಧಿವೇಶನದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕಾರ್ಮಿಕರ ಜೊತೆ ಮಾತುಕತೆ ಮಾಡುತ್ತೇನೆಂದು ಹೇಳಿದ್ದರು. ಕಾರ್ಮಿಕ ಸಂಘದ ಮುಖಂಡರ ಜೊತೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದಲ್ಲ ಎರಡು ಸಭೆಗಳನ್ನು ಮಾಡಿದ್ದಾರೆ. ಮಾನ್ಯ ಉಪ ಮುಖ್ಯ ಮಂತ್ರಿಗಳು ಒಂದಲ್ಲ ಎರಡಲ್ಲ ಮೂರು ಸಭೆಗಳನ್ನು ಮಾಡಿದ್ದಾರೆ. ಅಧಿಕಾರಿಗಳು ಅವರವರ ಹಂತದಲ್ಲಿ, ಕಾರ್ಮಿಕ ಮುಖಂಡರ ಜೊತೆಯಲ್ಲಿ ಸಭೆಗಳನ್ನು ಮಾಡಿದ್ದಾರೆ. ಕಾರ್ಮಿಕ ಮುಂಖಂಡರು ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಅದರ ವಿವರಗಳನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲರ ಬಗ್ಗೆ ಸಹ ನಾವು ಚರ್ಚೆ ಮಾಡಿದ್ದೇವೆ. ಭರವಸೆಯನ್ನು ಕೊಟ್ಟಿದ್ದೇನೆ. ವಿಧಾನ ಸಭೆಯ ಅಧಿವೇಶನ ನಡೆಯುತ್ತಿರುವುದರಿಂದ, ಲೋಕಸಭಾ ಚುನಾವಣೆ ಮುಗಿದ ಮೇಲೆ ನಾವು ಕುಳಿತು ಚರ್ಚೆ ಮಾಡೋಣ ಎಂದು ಹೇಳಿದ್ದೆವು. ಆದಾದ ನಂತರ ವಿಧಾನಸಭಾ ಅಧಿವೇಶನ ಪ್ರಾರಂಭವಾಯಿತು. ಈ ಹಂತದಲ್ಲಿ ನಿಂತಿದೆಯೇ ಹೊರತು ಸರ್ಕಾರ, ಇದನ್ನು ಪ್ರಿಸ್ಟೀಜ್ ಆಗಿ ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ಇದರಲ್ಲಿ ವೈಯುಕ್ತಿಕವಾಗಿರತಕ್ಕಂಥಾದ್ದು ಏನೂ ಸಹ ಇಲ್ಲ. ಒಳ್ಳೆಯ ಸಾರಿಗೆ ವ್ಯವಸ್ಥೆಯನ್ನು ಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆಂದು ಹೇಳಿ ಇವತ್ತು

ಈ ಘಟನೆ ಆಗಿರುವುದಕ್ಕೆ ಕಾರಣ ಏನು? 13ನೇ ತಾರೀಖು ಬಿ.ಎಂ.ಟಿ.ಎಸ್.ನ 10ನೇ ಡಿಪೋದಲ್ಲಿ ಪ್ರಾರಂಭವಾಯಿತು. ಮುಷ್ಕರ ಮಾಡತಕ್ಕಂಥ ಕಾಲದಲ್ಲಿ ಆಡಳಿತ ವರ್ಗಕ್ಕೆ ಆಗಲಿ ಸರ್ಕಾರಕ್ಕೆ ಆಗಲಿ, ಅಲ್ಲಿರತಕ್ಕಂಥ ನೌಕರ ಸಂಘದವರು ಯಾರಾದರೂ ಪ್ರತಿನಿಧಿಗಳು ಬಂದು ಈ ರೀತಿಯಾಗಿ ನಾವು ಮುಷ್ಕರವನ್ನು ಮಾಡುತ್ತಿದ್ದೇವೆಂದು ಎಲ್ಲಿಯೂ ಸಹ ಅವರು ಹೇಳಲಿಲ್ಲ. ಆದಾದ ನಂತರ 4-5 ಡಿಪೋಗಳಲ್ಲಿ ಬೆಂಗಳೂರಿನಲ್ಲಿ ಪ್ರಾರಂಭವಾಯಿತು. ಇದಾದ ಮೂರು ದಿವಸಗಳ ನಂತರ ಬೆಂಗಳೂರಿನ ಗ್ರಾಮಾಂತರ ಜಿಲ್ಲೆಯಲ್ಲಿ, ಕೋಲಾರ ಜಿಲ್ಲೆಯಲ್ಲಿ ಮೈಸೂರಿನಲ್ಲಿ ಮತ್ತು ತುಮಕೂರಿನಲ್ಲಿ ಸಹ ಇದು ಹಬ್ಬುತ್ತಿದೆ. ಮುಖ್ಯವಾಗಿ ಇದಕ್ಕೆ ಕಾರಣ ಏನು? ಹೈಕೋರ್ಟ್‌ನಲ್ಲಿ ಒಂದು ಆದೇಶ ಮಾಡಿದ್ದಾರೆ. ಹೈಕೋರ್ಟ್‌ನವರು ಏನು ಆದೇಶ ಮಾಡಿದ್ದಾರೆ? ಹೈಕೋರ್ಟಿನವರು ಇದನ್ನು ಮಾಡುವುದಕ್ಕೆ ಕಾರಣ ಏನು ಅಂದರೆ ಒಂದು ನೋ ಎಂಟ್ರಿ ರಸ್ತೆ ಇದೆ. ಆ ನೋ ಎಂಟ್ರಿ ರಸ್ತೆಯಲ್ಲಿ ದಿನಾಂಕ 25-10-85ರಲ್ಲಿ ಒಂದು ಬಿ.ಟಿ.ಎಸ್. ಬಸ್ಸು ಹೋಗಿ 13 ವರ್ಷದ ಬಾಲಕನ ಮೇಲೆ ಹರಿಯುತ್ತದೆ. ಅವರ ತಂದೆ ತಾಯಿಗಳೋ ಯಾರೋ ಒಂದು ಸಾರ್ವಜನಿಕ ಹಿತಾಸಕ್ತಿಯ ರಿಟ್ ಅನ್ನು ಹಾಕುತ್ತಾರೆ. ಆ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿಯನ್ನು ಹಾಕಿದಾಗ 9-9-97 ರಲ್ಲಿ ನಾಲ್ಕು ಆರ್ಡರ್‌ಗಳನ್ನು ಹೈಕೋರ್ಟಿನ ನ್ಯಾಯಾಧೀಶರು ಮಾಡುತ್ತಾರೆ. "That with immediate effect, any driver of the Corporation who is involved in any traffic office will have also to pay the fine personally out of his salary". ಟ್ರಾಫಿಕ್‌ಅಫೆನ್ಸ್ ಏನಾದರೂ ಆದರೆ ಅವರ ಸಂಬಳದಲ್ಲಿ ಕಟ್ ಮಾಡಬೇಕೆಂದು ಇದೆ. ಇದೇನೂ ಹೊಸದು ಅಲ್ಲ. 1982ನೇ ಇಸವಿಯಿಂದಲೂ ಸಹ ಟ್ರಾಫಿಕ್ ಅಫೆನ್ಸ್, ಆದರೆ ಸಂಬಳದಲ್ಲಿ ಕಲೆಕ್ಟ್ ಮಾಡತಕ್ಕಂಥಾದ್ದು ಇದು ಒಂದು ಪದ್ಧತಿ ಎರಡನೆಯದು. That in the event of the damage being caused to the Corporation's vehicles as a result of rash and negligent driving on the liability devolving on the Corporation that the whole or percentage of the amount as the disciplinary authority may consider fit, shall be recovered from the concerned employee". ಅಂದರೆ ಆ ಡ್ರೈವರ್‌ನಿಂದ ಡ್ಯಾಮೇಜ್ ಆಗಿರತಕ್ಕಂಥಾದ್ದನ್ನು ಭಾಗಶಃ ಅಥವಾ ಮ್ಯಾನೇಜ್‌ಮೆಂಟ್ ಅಥಾರಿಟಿ ಯಾರು ಇದ್ದಾರೆ ಅವರು ಫಿಕ್ಸ್ ಮಾಡುವಷ್ಟನ್ನು ಕೊಡಬೇಕಾಗುತ್ತದೆ.

"(2) That in event of the vehicle being involved in a serious incident resulting in death, that the employee shall be placed under suspension until the disposal of the legal proceedings and shall not be considered safe in the public interest to permit him to operate a passenger transport vehicle unless cleared of the charges by the competent court".

"(3) That in the event of the Corporation being held liable to pay compensation for injury or death that fair percentage of the compensation shall be recovered from the employee concerned if the Court Disciplinary Authority finds that it is a case of rash and negligent driving".

Under the directions of the Hon'ble High Court, the Assistant Registrar of High Court vide No..... dtd. 11.2.98, 9-9-97ರಲ್ಲಿ ಜಡ್ಜಮೆಂಟ್ ಬಂದಿರತಕ್ಕಂಥಾದ್ದು ಮಾನ್ಯ ಸಭಾಧ್ಯಕ್ಷರೇ, 11-2-98ರಲ್ಲಿ ಹೈಕೋರ್ಟಿನ ಅಸಿಸ್ಟೆಂಟ್ ರಿಜಿಸ್ಟ್ರಾರ್ ಅವರು ಸರ್ಕಾರಕ್ಕೆ ಒಂದು ಆದೇಶ ಕೊಟ್ಟಿದ್ದಾರೆ. High Court's order for appropriate corrective steps, to the notice of the government, The Government had called a meeting. ಇದಾದ ಮೇಲೆ 9-3-98 ರಲ್ಲಿ ಹೋಮ್ ಕಮೀಷನರ್, ಟ್ರಾನ್ಸ್‌ಪೋರ್ಟ್ ಸೆಕ್ರೆಟರಿ, ಅವರು ಒಂದು ಸಭೆಯನ್ನು ಕರೆದು ಹೈಕೋರ್ಟಿನ ಆರ್ಡರ್ ಅನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡಬೇಕು? ನಾವು ಇದುವರೆಗೂ ಯಾವುದೇ ಕ್ರಮವನ್ನು ಈ ಹೈಕೋರ್ಟ್ ಆರ್ಡರ್ ಮೇಲೆ ತೆಗೆದುಕೊಂಡಿಲ್ಲ. ಫೈನ್ ಕಲೆಕ್ಟ್ ಮಾಡಿಲ್ಲ, ಮತ್ತೊಂದು ಮಾಡಿಲ್ಲ, ಇದು ಅಪೀಲ್ ಹೋಗಬೇಕೇ ಬಿಡಬೇಕೇ, ಅಥವಾ ಯಾವ ರೀತಿ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ಮಾಡಲಿಕ್ಕೆ ಎಂದು ಹೇಳಿ ಹೋಮ್ ಕಮಿಷನ್‌ರ್ ಅವರು 9-3-98ಕ್ಕೆ ಒಂದು ಸಭೆಯನ್ನು ಕರೆದಿದ್ದಾರೆ. ಅದು ಬಿಟ್ಟರೆ ಸರ್ಕಾರ ಇನ್ನು ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಹೈಕೋರ್ಟಿನವರು ಏನು ಹೇಳಿದ್ದಾರೆ, ಪ್ರತಿಯೊಬ್ಬ ನೌಕರರಿಗೂ ಸಹ ಹೈಕೋರ್ಟಿನಲ್ಲಿ ಆಗಿರತಕ್ಕಂಥ ಆರ್ಡರ್‌ನ್ನು ನೀವು ಮುದ್ದಾಮ್ ಆಗಿ ತಿಳಿಸಿ ಅವರ ಕಡೆಯಿಂದ ಒಂದು ಸಹಿ ತೆಗೆದುಕೊಂಡು, ಹೈಕೋರ್ಟಿಗೆ ತಿಳಿಸಬೇಕೆಂದು ಹೇಳಿದ್ದಾರೆ. ಇದು ಬಿಟ್ಟರೆ ನಾವು ಯಾರ ಮೇಲೂ ಕ್ರಮವನ್ನು ತೆಗೆದುಕೊಂಡಿಲ್ಲ. ಇದುವರೆಗೂ ನಾವು ಯಾವುದನ್ನೂ ಸಹ ಮಾಡಿಲ್ಲ. ಈ ರೀತಿಯಾಗಿ ಹಠಾತ್ ಆಗಿ ಮುಷ್ಕರವನ್ನು ಮಾಡುವುದರಿಂದ ಸಾರ್ವಜನಿಕರಿಗೆ ಎಷ್ಟೊಂದು ತೊಂದರೆ ಆಗುತ್ತಿದೆ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ತಾವು ಮಾತನಾಡೇ ಇಲ್ಲ ಸರ್ಕಾರ ಸ್ಪಂದನೆ ಮಾಡಿಲ್ಲ ಜನಗಳ ಸಮಸ್ಯೆಗೆ ನೀವು ನಿರ್ಲಕ್ಷ್ಯದಿಂದ ಇದ್ದೀರಾ ಎಂದು ತಾವು ಹೇಳುತ್ತಿದ್ದೀರಿ ಇದು ಸತ್ಯಕ್ಕೆ ದೂರವಾಗಿರತಕ್ಕಂಥ ವಿಚಾರ. ಕಳೆದ 3 ದಿನಗಳಿಂದ ಪ್ರತಿಯೊಂದು ಡಿಪೋಗೆ ನಮ್ಮ ಎಂ.ಡಿ. ಹೋಗಿ ಅಲ್ಲಿರತಕ್ಕಂಥ ಕಂಡಕ್ಟರ್ಸ್ ಮತ್ತು ಡ್ರೈವರ್ಸ್ ಸಭೆಗಳನ್ನು ಮಾಡಿ, ನೋಡಪ್ಪ ಹೈಕೋರ್ಟ್ ಆರ್ಡರ್ ಈ ರೀತಿ ಇದೆ ನಾವು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ, ಏಕೆ ಈ ರೀತಿ ಮನಸ್ಸಿನಲ್ಲಿ ಇಟ್ಟುಕೊಂಡಿದ್ದೀರಾ? ಬೇರೆ ಬೇರೆ ವಿಚಾರಗಳನ್ನು ಇಟ್ಟುಕೊಂಡು ಏಕೆ ಈ ರೀತಿ ಮಾಡುತ್ತಿದ್ದೀರಿ ಎಂದು ನಾವು ಹೇಳಿದ್ದೇವೆ. ನಾನೂ ಸಹ ಖುದ್ದಾಗಿ ಅನೇಕರ ಜೊತೆಯಲ್ಲಿ ಮಾತನಾಡಿದ್ದೇನೆ. ಇವತ್ತೂ ನಾನು ಹೇಳುತ್ತಿದ್ದೇನೆ, ಸರ್ಕಾರ ಇದನ್ನು ಪ್ರಿಸ್ಟೀಜ್ ಇಷ್ಯೂ ಆಗಿ ಮಾಡಿಕೊಂಡಿಲ್ಲ. ನಾನು ಈ ಸಭೆಯ ಮೂಲಕವಾಗಿ ಅಪೀಲ್ ಮಾಡಿಕೊಳ್ಳುತ್ತಿದ್ದೇನೆ. ಮಕ್ಕಳಿಗೆ 6ನೇ ತರಗತಿ ಪರೀಕ್ಷೆ ಇದೆ. ಆ ಮಕ್ಕಳಿಗೆ ಬಹಳ ತೊಂದರೆ ಆಗುತ್ತಿದೆ. ಅರೆ ಸರ್ಕಾರಿ, ಸರ್ಕಾರಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ, ಕಾರ್ಮಿಕರಿಗೆ

ತೊಂದರೆ ಆಗುತ್ತಿದೆ. ನಾನು ಮನವಿ ಮಾಡುತ್ತಿದ್ದೇನೆ, ತಕ್ಷಣ ತಾವು ಕೆಲಸಕ್ಕೆ ವಾಪಸ್ಸು ಬನ್ನಿ. ಯಾವ್ಯಾವುದು ರಿಜಿಸ್ಟರ್ ಯೂನಿಯನ್ಸ್ ಇವೆ. ಕೆ.ಎಸ್.ಆರ್.ಟಿ.ಸಿ. ಯಲ್ಲಿ ಇಂಟಕ್ ಇದೆ ಬೇರೆ ಬೇರೆ ರಾಜಕೀಯ ಪಕ್ಷಗಳ ಸಂಘಗಳು ಇವೆ, ಎಲ್ಲಾ ಸಂದರ್ಭಗಳಲ್ಲಿ ನಾವು ಅವರನ್ನು ಕರೆದು ಕೂರಿಸಿ ಮಾತನಾಡಿ ಅವರ ಸಮಸ್ಯೆಗಳನ್ನು ಕೇಳಲಿಕ್ಕೆ, ಆದಷ್ಟು ಬಗೆಹರಿಸಲಿಕ್ಕೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ಅವರೂ ಸಹ ಎಲ್ಲಾ ರೀತಿಯ ಸಹಕಾರ ಕೊಡಬೇಕು ಎಂದು ಹೇಳಿ, ಈಗ ನಾನು ಏನು ಹೇಳಿದ್ದೇನೆ ಒಂದು ಅಥವಾ ಎರಡು ದಿವಸ ಪರ್ಯಾಯವಾದ ವ್ಯವಸ್ಥೆ ಮಾಡಿರತಕ್ಕಂಥಾದ್ದು, ಇದು ಬಹಳ ಚೆನ್ನಾಗಿದೆ ಎಂದು ನಾನು ಹೇಳುವುದಿಲ್ಲ. ಒಂದು ಮಾತು ಹೇಳಬೇಕಾಗುತ್ತದೆ, ನಮ್ಮ ಟ್ರಾನ್ಸ್‌ಪೋರ್ಟ್ ಕಮಿಷನರ್ ಮತ್ತು ಆರ್.ಟಿ.ಓ.ಗಳು ಅತ್ಯಂತ ಪ್ರಾಮಾಣಿಕವಾಗಿ, ನಿನ್ನೆ, ಮೊನ್ನೆ ರಜೆ ಇದ್ದರೂ ಸಹ ಒಂದು ಪರ್ಯಾಯವಾದ ವ್ಯವಸ್ಥೆ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಾವೆಲ್ಲರೂ ಸಹ ಈ ಸದನದಲ್ಲಿ ಇರತಕ್ಕಂಥವರು ಸಾರ್ವಜನಿಕ ವಲಯದಲ್ಲಿರತಕ್ಕಂಥ ಉದ್ದಿಮೆಯನ್ನು ಏನಾದರೂ ಮಾಡಿ ಉಳಿಸಿಕೊಳ್ಳಬೇಕು ಎಂದು ಇರತಕ್ಕಂಥವರು. ವೈಯುಕ್ತಿಕ ಪ್ರತಿಷ್ಠೆಗಳು ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಖುದ್ದಾಗಿ ಇವತ್ತು ಬೆಳಿಗ್ಗೆ ಸಾರಿಗೆ ಸಂಸ್ಥೆಯ ಅಧಿಕಾರಗಳನ್ನು, ಗೃಹ ಕಾರ್ಯದರ್ಶಿಗಳನ್ನು ನಮ್ಮನ್ನು ನಿನ್ನೆ ಇವತ್ತು ಎರಡು ಮೂರು ಸಾರಿ ಕರೆದು, ಸಭೆಯನ್ನು ನಡೆಸಿ ಏನು ಮಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡಿದ್ದಾರೆ. ನಾನು ಮತ್ತೊಮ್ಮೆ ಈ ಸದನದ ಮೂಲಕ ಕಾರ್ಮಿಕರು ಕೆಲಸಕ್ಕೆ ವಾಪಸ್ಸು ಬರಬೇಕು, ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

12.10 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ: 9-9-1997ರಲ್ಲಿ ಹಾಕಿದ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಆಧಾರದ ಮೇಲೆ ದಿನಾಂಕ: 11-2-1998 ರಲ್ಲಿ ಹೈಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಆಯಿತು. ಆ ಜಡ್ಜ್‌ಮೆಂಟ್ ಆಧಾರದ ಮೇಲೆ ಪೆನಾಲ್ಟಿ ಹಾಕತಕ್ಕಂಥಾದ್ದು ಇದರಲ್ಲಿ ಇದೆ. ಹೈಕೋರ್ಟ್ ಕೊಟ್ಟಂಥ ಜಡ್ಜ್‌ಮೆಂಟ್ ಪ್ರಕಾರ ಇಂಪ್ಲಿಮೆಂಟ್ ಮಾಡಲಾಗಿದೆಯೇ ಎಂದು ಅಲ್ಲಿನ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಸರ್ಕಾರಕ್ಕೆ ಆಕ್ಷನ್ ರಿಪೋರ್ಟ್ ಕೇಳಿದ್ದರಾ? ಅದು ಜಡ್ಜ್‌ಮೆಂಟ್‌ನಲ್ಲೇ ಇದೆ, ಅದನ್ನು ತಾವು ಓದಿದಿರಿ, ಅದನ್ನು ನಾನು ಸಂಪೂರ್ಣವಾಗಿ ಬರೆದುಕೊಳ್ಳುವುದಕ್ಕಾಗಲಿಲ್ಲ. 'The disciplinary authority may consider to levy the penalty' ಎನ್ನುವ ಒಂದು ಸೆಂಟೆನ್ಸ್ ತಾವು ಓದಿದಿರಿ. ಅಂದರೆ, it is not a mandatory provision. You may consider. ನಿಮ್ಮ ಜಡ್ಜ್‌ಮೆಂಟ್‌ನಲ್ಲಿ ಇದು ಸರಿಯಿಲ್ಲವೆಂದರೆ you can alos consider that ಮೈನರ್ ಫೆನಾಲ್ಟಿ ಹಾಕಿ ಕ್ಲೋಸ್ ಮಾಡತಕ್ಕಂಥಾದ್ದಾಗಲೀ ಅಥವಾ ಕಂಟಿನ್ಯೂಯಸ್ ಆಗಿ ರಿಕವರಿ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಆದರೆ, ಮ್ಯಾಂಡೇಟರಿ ಪ್ರಾವಿಷನ್ ಇಲ್ಲದೇ ಇದ್ದಾಗ ಕೂಡ, ಎಂಪ್ಲಾಯೀಸ್ ಮತ್ತು ಎಂಪ್ಲಾಯರ್ ಇಬ್ಬರೂ ಶಾಂತ ರೀತಿಯಿಂದ ಕೂಡಿಕೊಂಡು ಹೋಗಬೇಕು ಮತ್ತು ಈ ಪಬ್ಲಿಕ್ ಅಂಡರ್ ಸೆಕ್ಟಾರ್ ಏನಿದೆ, ಈ

ಕೆ.ಎಸ್.ಆರ್.ಟಿ.ಸಿ., ಇದನ್ನು ಉಳಿಸಿಕೊಳ್ಳಬೇಕೆಂದರೆ ನೀವೂ ಗಿವ್ ಅಂಡ್ ಟೇಕ್ ಮಾಡಬೇಕು. ಟ್ರೇಡ್ ಯೂನಿಯನ್‌ಗಳ ಮೇಲೆ ಪ್ರತಿ ದಿವಸ ಕ್ರಿಟೆಸೈಸ್ ಮಾಡುತ್ತಾ ಹೋದರೆ ಆಗುವುದಿಲ್ಲ. ಅವರು ಕೆಟ್ಟದ್ದನ್ನು ಮಾಡಿದಾಗ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ಅವರನ್ನು ಡಿಪೆಂಡ್ ಮಾಡಬೇಕೆಂದು ಅಲ್ಲ. ಆದರೆ, ಡೆಮಾಕ್ರಸಿಯಲ್ಲಿ ಟ್ರೇಡ್ ಯೂನಿಯನ್‌ಗಳಿಗೂ ಒಂದು ವಿಶೇಷವಾದ ಹಕ್ಕು ಮತ್ತು ಪಾತ್ರ ಇದೆ. ತಮ್ಮ ಹಕ್ಕುಗಳಿಗೆ ಹೋರಾಟ ಮಾಡತಕ್ಕಂಥಾದ್ದಕ್ಕೆ ಅವರಿಗೆ ಸಂಪೂರ್ಣವಾದ ಅಧಿಕಾರ ಕೂಡ ಇದೆ. ಆದರೆ, ಅವರು ಕಾನೂನುಬಾಹಿರವಾಗಿ ಮಾಡುತ್ತಿದ್ದರೆ, ಅದನ್ನು ಸರಿಯಿಲ್ಲವೆಂದು ಹೇಳುವುದಕ್ಕೆ ಇವರಿಗೂ ಕೂಡಾ ಹಕ್ಕು ಇದೆ. ಆದರೆ, ಇವತ್ತು ಏನಾಗುತ್ತಿದೆ? ಸುಮಾರು ಎರಡೂವರೆ ವರ್ಷಗಳಲ್ಲಿ ಇವರಿಗೂ ಅವರಿಗೂ ಆಗುತ್ತಲೇ ಇಲ್ಲ. ಬೇಸಿಕ್ ಆಗಿ ಎಲ್ಲಿ ಡಿಫರೆನ್ಸ್ ಇದೆ ಎಂಬುದು ಇವತ್ತೂ ಗೊತ್ತಾಗುತ್ತಿದೆ. ಆದುದರಿಂದ, ಈಗ ಮುಖ್ಯ ಮಂತ್ರಿಗಳೇ ಅವರುಗಳನ್ನು ಕರೆದು ಮಾತನಾಡಲಿ. ಮಾನ್ಯ ಮಂತ್ರಿಯವರು ಹೇಳಿದ ಪ್ರಕಾರ 1982 ರಿಂದ ಇದು ಇದ್ದೇ ಇವೆಯೆಂದು ಹೇಳಿದ್ದಾರೆ. ಈ 16 ವರ್ಷಗಳಲ್ಲಿ ಇಲ್ಲದೇ ಇದ್ದ ಸಮಸ್ಯೆ ಈಗ ಏಕೆ ಬಂತು? ಆದುದರಿಂದ, ದಯವಿಟ್ಟು ಅವರುಗಳನ್ನು ಕರೆಯಿಸಿ ಏನಾದರೂ ಒಂದು ಪರಿಹಾರವನ್ನು ಹುಡುಕಬೇಕು. ಕೆ.ಎಸ್.ಆರ್.ಟಿ.ಸಿ., ಯನ್ನು ಕಮರ್ಷಿಯಲ್ ಆರ್ಗನೈಸೇಷನ್ ಎಂದು ಟ್ರೀಟ್ ಮಾಡುವುದಕ್ಕೆ ಬರುವುದಿಲ್ಲ. ಪ್ರಪಂಚದಲ್ಲಿ ಎಲ್ಲೇ ಹೋದರೂ ಸಿಟಿನಲ್ಲಿ ಓಡಾಡತಕ್ಕಂಥ ಬಸ್‌ಗಳು ಲಾಸ್‌ನಲ್ಲೇ ಇವೆ, ಪ್ರಾಫಿಟ್‌ನಲ್ಲಿ ಯಾವುವೂ ಇಲ್ಲ. ಇವೆಲ್ಲಾ ಸರ್ವೀಸ್ ಓರಿಯೆಂಟೆಡ್ ಸಂಸ್ಥೆಗಳು. ಮಂಗಳೂರು, ಮದ್ರಾಸ್ ಮತ್ತು ಮುಂಬಯಿಗಳಿಗೆ ಹೋಗತಕ್ಕಂಥ ಬಸ್‌ಗಳ ಬಗ್ಗೆ ಬೇಕಾದರೆ ಕಮರ್ಷಿಯಲ್ ವಯಬಿಲಿಟಿ ಕೇಳಬಹುದು. ಆದರೆ, ಜನರುಗಳಿಗೆ ಫೆಸಿಲಿಟಿ ಕೊಡಬೇಕೆನ್ನುವ ದೃಷ್ಟಿಯಿಂದ ಏನು ಸರ್ಕಾರ ಮಾಡಿರುತ್ತದೋ ಅದು ಸರ್ಕಾರದ ಕರ್ತವ್ಯ ಮತ್ತು ಆಬ್ಲಿಗೇಷನ್ ಆಗಿರುತ್ತದೆ. ಈ ಆಬ್ಲಿಗೇಷನ್ ಅನ್ನು ಫುಲ್‌ಫಿಲ್ ಮಾಡುವಾಗ ಲಾಸ್ ಆಗೇ ಆಗುತ್ತದೆ. ಹಾಸ್ಪಿಟಲ್‌ನಲ್ಲಿ ಲಾಸ್ ಆಗುತ್ತದೆ, ಕೆ.ಎಸ್.ಆರ್.ಟಿ.ಸಿ. ನಲ್ಲಿ ಲಾಸ್ ಆಗುತ್ತದೆ, ಹೀಗೆ ಅನೇಕ ಕಡೆ ಲಾಸ್ ಆಗುವ ಸಂದರ್ಭ ಇರುತ್ತದೆ. ಅದನ್ನು ತಿಳಿದುಕೊಂಡೇ ಅದಕ್ಕೆಲ್ಲಾ ಪ್ರಾವಿಷನ್ ಮಾಡಿಕೊಂಡು ಎಲ್ಲಾ ಸರ್ಕಾರಗಳು ನಡೆಯುತ್ತವೆ. ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿಯಲ್ಲಿ ಲಾಸ್ ಆಗುತ್ತದೆಂದರೆ, ಅದಕ್ಕೆ ಕಡಿವಾಣ ಹಾಕಿ ಕ್ಲೋಸ್ ಮಾಡಬೇಕಾಗುತ್ತದೆ, ಇಲ್ಲವೆಂದರೆ ರಿವೈವ್ ಮಾಡಬೇಕು. ಆದರೆ ಏನು ಇಂಥ ಸರ್ವೀಸಸ್ ಸೆಕ್ಟಾರ್ಸ್ ಇವೆ, ಆ ಸೆಕ್ಟಾರ್ಸ್‌ನಲ್ಲಿ ನೀವು ಆಸಕ್ತಿ ವಹಿಸಿ ಅವುಗಳಿಗೆ ಹೆಚ್ಚಿನ ಶಕ್ತಿ ಕೊಟ್ಟು ಜೀವಂತ ಇರುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತಾಗಿ ಕಮರ್ಷಿಯಲ್ ಔಟ್‌ಲುಕ್‌ನಿಂದ ನೋಡಿಕೊಂಡು ಅದಕ್ಕೆ ಹೆಚ್ಚಿಗೆ ಮಾಡಿದ್ದೇವೆಂದು ಹೇಳುವುದು ಸರಿಯಲ್ಲ. ಇದಕ್ಕೆ ಪರ್ಯಾಯವನ್ನು ಕೂಡ ಇದುವರೆಗೆ ಅವರು ಏನೂ ಕಂಡುಹಿಡಿಯದೆ ಮತ್ತೆ ನಾವು ಮಾತನ್ನು ಮುಂದುವರಿಸುತ್ತೇವೆ ಎನ್ನುವುದನ್ನೇ ಹೇಳಲಾಗುತ್ತಿದೆ. ಇವತ್ತು ನಡೆಯುತ್ತಿರುವ ಎಕ್ಸಾಮಿನೇಷನ್‌ಗಳನ್ನು ಪೋಸ್ಟ್‌ಪೋನ್ ಮಾಡುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳಲಾಗಿದೆಯಾ? ಅದೂ ಇಲ್ಲ. ಇವತ್ತಿನ ದಿವಸ ಬಸ್‌ಗಳು ಇಲ್ಲದೆ ವಿದ್ಯಾರ್ಥಿಗಳಿಗೆ, ಗೌರ್ನಮೆಂಟ್ ಮತ್ತು ಸೆಮಿ ಗೌರ್ನಮೆಂಟ್ ಎಂಪ್ಲಾಯಿಸ್‌ಗೆ ತೊಂದರೆಯಾಗುತ್ತಿದೆ. ಆದುದರಿಂದ, ಈ ದಿವಸವೇ ಅವರುಗಳನ್ನು ಕರೆಸಿ ಮಾತನಾಡಿ ಸಮಸ್ಯೆ

ಬಗೆಹರಿಸುತ್ತೇವೆ ಎನ್ನುವುದನ್ನು ಸ್ಪಷ್ಟವಾಗಿ ಸರ್ಕಾರ ಹೇಳಬೇಕಾಗುತ್ತದೆ. ಸರ್ಕಾರ ಅಂದ ಮೇಲೆ ಈ ಸಮಸ್ಯೆಗೆ ಏನಾದರೂ ಒಂದು ಪರಿಹಾರ ಹುಡುಕಬೇಕು. ಸರ್ಕಾರ ಬಿಟ್ಟು ಬೇರೆಯವರು ಇದಕ್ಕೆ ಪರಿಹಾರ ಕಂಡು ಹಿಡಿಯುವುದಕ್ಕೆ ಸಾಧ್ಯವಿದೆಯೇನು? ಆದುದರಿಂದ, ದಯವಿಟ್ಟು ಈ ಬಗ್ಗೆ ಸ್ಪಷ್ಟವಾದ ಮತ್ತು ಖಚಿತವಾದ ನಿಲುವು ತಾಳಿ ಇದನ್ನು ಇಲ್ಲಿಗೆ ಮುಕ್ತಾಯ ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸದನಕ್ಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ):- ಮಾನ್ಯ ಅಧ್ಯಕ್ಷರೆ, ರಸ್ತೆಗಳನ್ನು ರಾಷ್ಟ್ರೀಕರಣ ಮಾಡಿದ ಉದ್ದೇಶ ಏನು? ಜನಗಳಿಗೆ ಸೌಕರ್ಯ ಒದಗಿಸಬೇಕೆನ್ನುವುದೇ ಇದರ ಮೂಲ ಉದ್ದೇಶ. ಜನರ ಸೌಕರ್ಯಕ್ಕಾಗಿ ಇರುವುದಾದರೆ ಈ ಕೆ.ಎಸ್.ಆರ್.ಟಿ.ಸಿ., ಸಂಸ್ಥೆಯನ್ನು ಇಟ್ಟುಕೊಳ್ಳಿ, ಕಂಡಕ್ಟರುಗಳು, ಡ್ರೈವರ್‌ಗಳು ಮತ್ತು ಹೆಲ್ಪರುಗಳ ಕ್ಷೇಮಕ್ಕಾಗಿ ಈ ಸಾರಿಗೆ ಸಂಸ್ಥೆ ಇರುವುದಾದರೆ ಅದು ನಮಗೆ ಬೇಡ. ಕೆಲವು ಸರ್ವೀಸಸ್‌ನ್ನು ಮೋಸ್ಟ್ ಎಸೆನ್‌ಷಿಯಲ್ ಎಂದು ಮಾಡಿ, ಇಂಥಾ ಮುಷ್ಕರಕ್ಕೆ ಅವಕಾಶವಿಲ್ಲದಂತೆ ಕಾನೂನು ಮಾಡಬೇಕು. ಇಂಥ ಕೆಲಸ ಆಗಕೂಡದು. ಇದ್ದಕ್ಕಿದ್ದ ಹಾಗೆ ಸ್ಟ್ರೈಕ್ ಮಾಡಿದರೆ ಎಷ್ಟು ಜನಗಳಿಗೆ ತೊಂದರೆ? ಶಾಲೆಗೆ ಹೋಗುವ ಮಕ್ಕಳಿಗೆ ಪರೀಕ್ಷೆ ಇದೆ, ಕೆಲಸಕ್ಕೆ ಹೋಗುವವರಿಗೆ ತೊಂದರೆಯಾಗಿದೆ. ಇದು ಬಹಳ ಅತಿ ಆಯಿತು. ಏನಾದರೂ ಬೇಕಾದಾಗ ಸರ್ಕಾರದ ಮೂಗು ಹಿಡಿದುಕೊಂಡು ಬಿಡುವುದು. ಇದೇ ರೀತಿ ಡಾಕ್ಟರುಗಳು ಸ್ಟ್ರೈಕ್ ಮಾಡಿಬಿಡುತ್ತಾರೆ. ಎಮರ್ಜೆನ್ಸಿಯಾಗಿ ಯಾರಾದರೂ ಸಾಯುತ್ತಿದ್ದರೂ ಅವರನ್ನು ನೋಡುವುದಕ್ಕೆ ಡಾಕ್ಟರುಗಳು ಹೋಗುವುದಿಲ್ಲ. ಆದುದರಿಂದ, ಇಂಥಾ ಕೆಲವು ಸೇವೆಗಳನ್ನು ಗುರುತಿಸಿ, ಇಂಥಾ ಕೆಲಸ ಮುಂದೆ ಆಗದ ರೀತಿಯಲ್ಲಿ ಏನು ಮಾಡಬೇಕು? ಇದನ್ನು ಯಾವ ರೀತಿ ತಹಬಂದಿಗೆ ತರಬೇಕು? ಎಂದು ಯೋಚನೆ ಮಾಡಬೇಕು. ಇಂಥಾ ಸಂಸ್ಥೆಗಳಲ್ಲಿ ನಷ್ಟವನ್ನೂ ಅನುಭವಿಸಿ, ಸಬ್ಸಿಡಿಯನ್ನೂ ಕೊಟ್ಟು, ಸಾರ್ವಜನಿಕರಿಗೆ ತೊಂದರೆ ಆಗುವುದಾದರೆ ಇಂಥಾ ಸಂಸ್ಥೆ ಏಕೆ ಬೇಕು? ಇದಕ್ಕಾಗಿಯೇ ಸಂಸ್ಥೆಯನ್ನು ಪ್ರಾರಂಭ ಮಾಡಲಾಯಿತಾ? ಇದರ ಬಗ್ಗೆ ಸೀರಿಯಸ್ ಆಗಿ ಯೋಚನೆ ಮಾಡಿ ಇನ್ನು ಮುಂದೆ ಇಂಥವು ಆಗದ ಹಾಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. People are taken for granted. They were taken for a ride. There is nobody to consider the problems of the people. ಅಲ್ಲಲ್ಲೇ ಬಸ್‌ಗಳನ್ನು ನಿಲ್ಲಿಸಿಬಿಡುವುದು, ಹಳ್ಳಿಯಿಂದ ನಮ್ಮಂಥವರನ್ನು ನೋಡುವುದಕ್ಕೆ ಬರತಕ್ಕಂಥ ಜನರು ಏನು ಮಾಡಬೇಕು? ಇವತ್ತು, ಬಸ್‌ಸ್ಟ್ಯಾಂಡ್‌ನಿಂದ ಮತ್ತು ರೈಲ್ವೆ ಸ್ಟೇಷನ್‌ನಿಂದ ಜಯನಗರದಲ್ಲಿರುವ ನಮ್ಮ ಮನೆಗೆ ನಡೆದುಕೊಂಡು ಬಂದಿದ್ದಾರೆ. ರಾಜ್ಯದಲ್ಲಿರತಕ್ಕಂಥ ಎಲ್ಲಾ ಜನರನ್ನು ನಾವು ಬಲಿ ತೆಗೆದುಕೊಂಡು ಬಿಡುತ್ತೇವೆಂದು ಈ ರೀತಿ ಕೆಲಸ ಮಾಡಿದರೆ ಹೇಗೆ? ಇದು ಆಗಬಾರದು, ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ಏನಾದರೂ ಯೋಚನೆ ಮಾಡಿ ಹೊಸದಾಗಿ ಕಾನೂನು ತಂದು, ಇಂಥ ಸಂಸ್ಥೆಗಳು ಜನರಿಗಾಗಿ ಇವೆಯೆಂದು ತಿಳಿಸಬೇಕು. ಜನರಿಗೆ ಈ ಸಂಸ್ಥೆ ಇದೆಯೆಂದು ಅಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರೂ ಅರಿತುಕೊಳ್ಳಬೇಕು ಮತ್ತು ಎಲ್ಲರೂ ಅರಿತುಕೊಳ್ಳಬೇಕು. ಈಗ ಉಂಟಾಗಿರುವ ಸಮಸ್ಯೆಯನ್ನು ತಕ್ಷಣ ಪರಿಹಾರ ಮಾಡಬೇಕು. ಇದರಲ್ಲಿ ಬಿಗುಮಾನ

ಬೇಡ. ಖಾಯಂ ಆಗಿ ಇದನ್ನು ತಹಬಂದಿಗೆ ತರುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಲೇಬೇಕು. ಎಕ್ಸ್‌ಟ್ರಾ ಎಸೆನ್‌ಷಿಯಲ್ ಸರ್ವೀಸಸ್ ಎಂದು ಡಿಕ್ಲೇರ್ ಮಾಡುವಂಥ ಕೆಲಸವನ್ನಾದರೂ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಅವರು ಮುಷ್ಕರವನ್ನು ನಿಲ್ಲಿಸಿದರೆ ಮಾತುಕತೆಗೆ ಕರೆಯುತ್ತೇವೆಂದು ಹೇಳುವ ಬದಲು, ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಈಗಲೇ ಅವರನ್ನು ಮಾತುಕತೆಗೆ ಕರೆದರೆ ಸಮಸ್ಯೆ ಬಗೆಹರಿಯುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಕೋಪತಾಪದಲ್ಲಿ ಘರ್ಷಣೆ ಮಾಡಿಕೊಂಡು ಅದನ್ನು ಜಾಸ್ತಿ ಮಾಡುವ ಬದಲು ಒಳ್ಳೆಯ ವಾತಾವರಣಕ್ಕೆ ತರುವುದು ಒಳ್ಳೆಯದೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ನಂಜೇಗೌಡರ ಮಾತು ಹೆಚ್ಚು ಸತ್ಯದ ಹತ್ತಿರ ಇದೆ. ವಿರೋಧ ಪಕ್ಷಗಳು ಎಂದರೆ, ಎಲ್ಲಾ ವಿಷಯಕ್ಕೂ ವಿರೋಧ ಮಾಡುವುದೇ? ಹೈಕೋರ್ಟ್ ಆರ್ಡರ್ ಆಗಿ 9 ತಿಂಗಳಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಬೇಕಾದಷ್ಟು ಆಕ್ಸಿಡೆಂಟ್ಸ್ ಆಗಿವೆ. ಡ್ರೈವರುಗಳು, ರ್‍ಯಾಷ್ ಡ್ರೈವಿಂಗ್, ನೆಗ್ಲಿಜೆಂಟ್ ಡ್ರೈವಿಂಗ್, ಮತ್ತು ನೋ ಎಂಟ್ರಿ ರಸ್ತೆಗಳಲ್ಲಿ ಹೋಗಿ ಆಕ್ಸಿಡೆಂಟ್ ಮಾಡಿರುವುದೂ ಉಂಟು. ಅದಕ್ಕಾಗಿ ಎಲ್ಲಾ ಡ್ರೈವರುಗಳೂ ಶಿಕ್ಷಾರ್ಹರೆಂದು ನಾನು ಹೇಳುವುದಿಲ್ಲ. ಕೋರ್ಟ್ ಕಛೇರಿಯಿಂದ, ಕೋರ್ಟ್ ಆರ್ಡರ್ ಆಗಿದೆ, ಅದರ ಬಗ್ಗೆ ಏನು ಮಾಡಲಾಗಿದೆಯೆಂದು ಸರ್ಕಾರದ ಆಫೀಸರ್‌ಗಳನ್ನು ಅವರು ಕೇಳಿದ್ದಾರೆ. ಇದನ್ನು ಹೇಗೆ ಇಂಪ್ಲಿಮೆಂಟ್ ಮಾಡುತ್ತೀರಿ? Let anybody show me a way to implement that order. ಅದನ್ನು ಮತ್ತೆ ಮತ್ತೆ ಕೋರ್ಟ್‌ಗೆ ಮನವಿ ಮಾಡಿಕೊಳ್ಳುತ್ತೇವೆ. ಏಕೆಂದರೆ, ಕೋರ್ಟ್‌ನವರ ಮುಂದೆ ನಾವು ಏನೂ ವಾದ ಮಾಡುವುದಕ್ಕಾಗುವುದಿಲ್ಲ. ಅದನ್ನು ಹೇಗೆ ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ ಎನ್ನುವುದನ್ನು ಕೋರ್ಟ್‌ಗೆ ಹೇಳಿದ್ದೇವೆ. ಇದಕ್ಕಾಗಿ ಇದ್ದಕ್ಕಿದ್ದ ಹಾಗೆ ಸ್ಟ್ರೈಕ್ ಮಾಡುತ್ತೇವೆಂದು ಹೇಳಿಬಿಡುವುದೇ? ಸರ್ಕಾರದ ವತಿಯಿಂದ, ಇಲಾಖೆ ವತಿಯಿಂದ, ಸಂಸ್ಥೆ ವತಿಯಿಂದ ಯಾವುದೇ ರೀತಿಯ ತಪ್ಪಾಗಲೀ, ದುರ್ವರ್ತನೆಯಾಗಲೀ ಯಾವುದೂ ಇಲ್ಲ. ಹಾಗೇನೇ ಸ್ಟ್ರೈಕ್ ಮಾಡಿದ್ದಾರೆ. who has taken whom for granted, ಸರ್ಕಾರ has been taken for granted, ನಾನು ನಿಮ್ಮ ಮಾತನ್ನು ಒಪ್ಪುತ್ತೇನೆ. ಆದರೆ ಇಂತಹ ಸಮಯದಲ್ಲಿ ಯಾವಾಗ ಎಂದರೆ ಅವಾಗ ಯಾವ one section of the people - whether it public sector or private sector ಇಡೀ ಸಮಾಜವನ್ನು ಆತಂಕದಲ್ಲಿಟ್ಟುಕೊಳ್ಳತಕ್ಕಂಥದ್ದು ಪುನರಪಿ ಆಗಬಾರದು. I entirely agree with Sri Nanje Gowda. Let them all think about it. ಬೆಳಿಗ್ಗೆ ಮಕ್ಕಳು strike after examination ಎಂದು ಬೋರ್ಡ್ ಹಿಡಿದಿದ್ದರು. ಅದನ್ನು ನೋಡಿ ನನಗೆ ತುಂಬಾ ಕೋಪ ಬಂತು. ಈ ಮುಷ್ಕರದ ಉದ್ದೇಶ ಏನಿರಬಹುದು? ನಿಜವಾಗಿಯೂ ಇದರಲ್ಲಿ ಏನಾದರೂ ತೊಂದರೆ ಇದ್ದರೆ ಅವರನ್ನು ಕರೆಯಿಸಿ ಮಾತನಾಡೋಣ. ಕೆಲವು ಸಂದರ್ಭದಲ್ಲಿ ನಾನೇ ಮುಖಂಡರನ್ನು ಕರೆಸಿ, ಅವರ ಹತ್ತಿರ ಮಾತನಾಡಿ ಕೆಲವು ಸಮಸ್ಯೆಗಳನ್ನು ಬಗೆಹರಿಸಿದ್ದೇನೆ. ಬಗೆಹರಿಸಬೇಕಾದ ಇನ್ನೂ ಕೆಲವು ಸಮಸ್ಯೆಗಳಿವೆ. ನಾನು ಕಮ್ಯುನಿಸ್ಟ್ ಪಾರ್ಟಿ ಲೀಡರ್‌ಗಳನ್ನು ಕರೆಸಿ ಎಲ್ಲಾ ಮಾತನಾಡಿದ್ದೇನೆ.

ಶ್ರೀರಾಮರೆಡ್ಡಿಯವರೇ, ಟ್ರೇಡ್ ಯೂನಿಯನಿಸಂಗೂ, ಸರ್ಕಾರಕ್ಕೂ ಎಲ್ಲಾ ಸಮಯದಲ್ಲಿಯೂ ಹೊಂದಾಣಿಕೆ ಇರುವುದಿಲ್ಲ. ಸಿಂಧ್ಯ ಅವರು ಸಾರಿಗೆ ಸಚಿವರಾದರೂ ಅಷ್ಟೆ, ನೀವು ಸಚಿವರಾಗಿದ್ದರೂ ಅಷ್ಟೆ. ಯೂನಿಯನ್ ಕೇಳಿದ್ದನ್ನೆಲ್ಲಾ ಕೊಡುವುದಕ್ಕೆ ಆಗುವುದಿಲ್ಲ. ಅಥವಾ ನಾನು ಹೇಳಿದ್ದೇ ಸರಿ ಎಂದು ನಾನೂ ಕೂಡ ಹೇಳುವುದಿಲ್ಲ. ಇಂತಹ ಸಮಯದಲ್ಲಿ ಇಡೀ ಸಮಾಜದ ಹಿತದೃಷ್ಟಿಯಿಂದ ನಾವು ಯಾವ ರೀತಿ ನಿಲುವ ತಳೆದುಕೊಳ್ಳಬೇಕು ಎಂಬುದನ್ನು ಬಿಟ್ಟು ಅವರಿಗೆ ನೀವು as if we are competing with the trade unions..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ನಾನೂ ಕೂಡ ಸಮಾಜದ ಹಿತದೃಷ್ಟಿಯಿಂದಲೇ ಹೇಳಿದ್ದುದು. ಸಾರ್ವಜನಿಕರಿಗೆ ಇದರಿಂದ ತೊಂದರೆಯಾಗುತ್ತಿರುವುದರಿಂದ ಸರ್ಕಾರ ಜವಾಬ್ದಾರಿ ವಹಿಸಿ ಮಧ್ಯಪ್ರವೇಶ ಮಾಡಬೇಕು ಎಂದು ನಾನು ಹೇಳಿದ್ದುದು. ಕಾರ್ಮಿಕರ ಹಿತದೃಷ್ಟಿಯಿಂದ ನೀವು ಮಧ್ಯಪ್ರವೇಶ ಮಾಡಿ ಎಂದು ಹೇಳಲಿಲ್ಲ. ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ನೀವು ಮಧ್ಯಪ್ರವೇಶ ಮಾಡಿ.

ಶ್ರೀ ಜೆ.ಹೆಚ್. ಪಟೇಲ್:- ಒಂದು ಪಕ್ಷ ಕಾರ್ಮಿಕರಿಗೆ ಅನ್ಯಾಯವಾಗಿದ್ದರೆ ಅವರ ಪರವಾಗಿ ನೀವು ವಾದ ಮಾಡಿದರೂ ಸರಿ I am not denying it. ಯಾರಿಗೂ ಏನೂ ಅನ್ಯಾಯವಾಗದೆ, ನನಗೆ ತಿಳಿದ ಹಾಗೆ ನಿನ್ನ ಮೈಮೇಲೆ ಬಸ್ ಬಿಡುತ್ತೇನೆ ಎಂದರೆ ಏನರ್ಥ? ಅದಕ್ಕೆ ಇದರಲ್ಲಿ ಯಾವ ಪ್ರೆಸ್ಟೀಜ್ ಆಗಲಿ ಬೇರೇನಾಗಲಿ ಇಲ್ಲ I am only seeking the blessings of this House with your permission we will deal with the situation, according to the demands of the situation which has arisen. ಶಾಲೆಗೆ ಹೋಗುವ ಮಕ್ಕಳಿಗೆ, ಕಛೇರಿಗೆ ಹೋಗುವವರಿಗೆ, ಆಸ್ಪತ್ರೆಗಳಿಗೆ ಹೋಗುವವರಿಗೆ ತೊಂದರೆಯಾಗುತ್ತಿರುವುದನ್ನು ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. We will try to make some arrangements, for the present. ಎಲ್ಲಾ ಕಡೆ ಸರ್ವೀಸ್ ಆರ್ಗನೈಜೇಷನ್‌ಗಳಿವೆ. ಲಂಡನ್ ಸಿಟಿಯಲ್ಲಿ, ನ್ಯೂಯಾರ್ಕ್ ಸಿಟಿಯಲ್ಲಿ ಕೂಡ ಇಂಥವುಗಳಿವೆ. ಮಾಸ್ಕೋದಲ್ಲಿ 15 ಪೈಸೆಯನ್ನೋ ಅಥವಾ 30 ಕೊವೆಕ್ಸ್‌ನ್ನೋ ಕೊಟ್ಟರೆ ಎಲ್ಲಾ ಕಡೆ ತಿರುಗಾಡಬಹುದು. ಕಳೆದ 10-12 ವರ್ಷಗಳಿಂದ ನಮ್ಮ ಸಾರಿಗೆ ಸಂಸ್ಥೆಯಲ್ಲಿನ ಎಲ್ಲಾ ಬಸ್‌ಗಳನ್ನೂ ರಿಪೇರಿ ಮಾಡಿಸಿ, ಹೊಸ ಬಸ್‌ಗಳನ್ನು ಕೊಂಡುಕೊಳ್ಳಲಾಗಿದೆ. ಅವರು ಹೇಳಿದ್ದನೆಲ್ಲಾ ಕೇಳಿಕೊಂಡು ಬಂದಿದ್ದೇವೆ. ಒಬ್ಬ ಬಸ್ ಡ್ರೈವರ್, ಡಿಪೋ ಮ್ಯಾನೇಜರನ್ನು ಹಿಡಿದು ಹೊಡೆದುದಕ್ಕೆ ಡಿಪೋ ಮ್ಯಾನೇಜರ್‌ಗಳ ಮುಷ್ಕರ, ಡ್ರೈವರ್ ತಪ್ಪು ಮಾಡಿದ್ದಾನೆ ಎಂದು ಸಸ್ಪೆಂಡ್ ಮಾಡಿದರೆ, ಡ್ರೈವರ್‌ಗಳ ಮುಷ್ಕರ ಈ ರೀತಿ ಆದರೆ ನಾವು ಏನು ಮಾಡಬೇಕು? ಎಲ್ಲಿಗೆ ಹೋಗಬೇಕು? ಇದಕ್ಕೆ ಮಾರ್ಗವೇನು? ತೊಗರಿ ಬೆಳೆಗೆ ಕ್ರಿಮಿಕೀಟಗಳು ಬಂದರೂ ಸರ್ಕಾರ, ಮತ್ತೊಂದು ಕಡೆ ಭೂಕಂಪವಾದರೂ ಸರ್ಕಾರ, ಮಳೆ ಜಾಸ್ತಿಯಾದರೂ ಸರ್ಕಾರ, ಮಳೆ ಬೀಳದೆ ಹೋದರೂ ಸರ್ಕಾರವೇ ಜವಾಬ್ದಾರಿ ಎಂದರೆ ಏನರ್ಥ? ಅದಕ್ಕಾಗಿ ಯಾವುದಕ್ಕೆ ಸರ್ಕಾರವನ್ನು ಮಧ್ಯೆ ತರಬೇಕು, ಎಷ್ಟು ಮಿತವಾಗಿ ಅಧಿಕಾರವನ್ನು ಉಪಯೋಗಿಸಬೇಕು ಎಂಬುದನ್ನು ನಾವೂ ಕೂಡ ಒಪ್ಪಿಕೊಳ್ಳುತ್ತೇವೆ. ಆದರೆ ಈ ಸಮಯದಲ್ಲಿ

ನಾನು ತಮ್ಮ ಮೂಲಕ ಇಷ್ಟನ್ನು ಮಾತ್ರ ಹೇಳುತ್ತೇನೆ. ಬಸ್ ಡ್ರೈವರ್‌ಗಳು ಮಾಡುತ್ತಿರುವಂತಹ ಮುಷ್ಕರ, ಅವರಿಗೂ ಒಳ್ಳೆಯದಲ್ಲ, ಜನರಿಗೂ ಒಳ್ಳೆಯದಲ್ಲ. ಜನ ಮತ್ತೆ ಉದ್ರೇಕಕ್ಕೆ ಹೋಗಬಹುದು. ಆದುದರಿಂದ ಸರ್ಕಾರದ ಹತ್ತಿರ ನಿಮ್ಮದೇನಾದರೂ ಚರ್ಚೆ ಮಾಡುವಂತಹ ವಿಷಯವಿದ್ದರೆ ಬನ್ನಿ. ನಿಮ್ಮ ಜೊತೆ ಮಾತನಾಡುವುದಕ್ಕೆ ನಾನು ಯಾವತ್ತೂ ತಯಾರಿದ್ದೇನೆ. ನೀವು ನಮ್ಮ ಜೊತೆ ಮಾತನಾಡಲು ಬರುತ್ತೇವೆ ಎಂದರೆ ನಾವು ಯಾವತ್ತೂ ಬರಬೇಡಿರಿ ಎಂದು ಹೇಳಿಲ್ಲ. ಅದು ಹೈಕೋರ್ಟಿನ ಆದೇಶದ ಪ್ರಕಾರ ಆಗಿದ್ದರೆ, ನೀವು ಹೈಕೋರ್ಟ್‌ಗೆ ಹೋಗಿ ಎಂದು ಹೇಳುವುದಕ್ಕಾಗುತ್ತದೆಯೆ? ಇದು ಬಹಳ ಸೂಕ್ಷ್ಮವಾಗಿರುವುದರಿಂದ ಅವರು ಮುಷ್ಕರ ನಿಲ್ಲಿಸಿ ಅಥವಾ ನಿಲ್ಲಿಸದೆಯೇ ಬೇಕಾದರೆ ಮಾತುಕತೆಗೆ ಬರಲಿ. ನಾವೂ ಕೂಡ ಮಾತುಕತೆಗೆ ಬರಲು ಸಿದ್ಧರಿದ್ದೇವೆ. ಅದಕ್ಕೆ ಬದಲಿ ವ್ಯವಸ್ಥೆಯನ್ನೂ ಕೂಡ ಮಾಡಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ಇದು ಜನರಿಗೆ ಆಗಾಗ ಬರುವಂತಹ ಒಂದು ಪಿಡುಗಾಗಬಾರದು. ಇದನ್ನು ತಪ್ಪಿಸುವುದಕ್ಕೆ ಒಂದು ಪರ್ಯಾಯ ವ್ಯವಸ್ಥೆಯಾಗಬೇಕು. Alternative arrangement. It is not a question of profit of loss ಮಂಗಳೂರಿನಲ್ಲಿ ಏತಕ್ಕೆ ಅಷ್ಟು ಚೆನ್ನಾಗಿ ನಡೆಯುತ್ತಿದೆ? ಅಲ್ಲಿ ಫಸ್ಟ್ ಕ್ಲಾಸ್ ಪ್ರೈವೇಟ್ ಸರ್ವೀಸ್ ಆಗುತ್ತಿದೆ. ಸಾರಿಗೆ ಸಂಸ್ಥೆಯವರೂ ಲಾಭ ಮಾಡಿಕೊಳ್ಳುತ್ತಿದ್ದಾರೆ, ಜನರಿಗೂ ಅನುಕೂಲವಾಗಿದೆ. ಯಾರೂ 5 ನಿಮಿಷ ಕೂಡ ಕಾಯುವುದಿಲ್ಲ. ದೆಹಲಿಯಲ್ಲಿಯೂ ಕೂಡ ಸಾರಿಗೆ ಸಂಸ್ಥೆ ಪ್ರೈವೇಟೈಸ್ ಆಯಿತು. ಆದುದರಿಂದ ಪ್ರೈವೇಟೈಜೇಷನ್ ಎಂಬುದನ್ನು ಪ್ರಸ್ತಾಪದ ಒಂದು ವಿಷಯವನ್ನಾಗಿ ಮಾಡಬಾರದು. ನಾನು ಅವರಿಗೆ ಹೇಳುವುದಿಷ್ಟೆ. ದಯಮಾಡಿ ನೀವು ನಿಮ್ಮ ಜವಾಬ್ದಾರಿಯನ್ನು ತಿಳಿದುಕೊಂಡು ನಿಮಗೆ ಸರ್ಕಾರದಿಂದ ಏನಾದರೂ ಅಘಾತವಾಗಿದ್ದರೆ ಬನ್ನಿ, ಮಾತುಕತೆ ಆಡೋಣ. ಮೊದಲು you are obliged to the people, not to the Government. ಎಂಬ ಮಾತನ್ನು ಹೇಳಿ ಮಾನ್ಯ ವಿರೋಧ ಪಕ್ಷದ ನಾಯಕರೆಲ್ಲರೂ ಈ ಸಂದರ್ಭದಲ್ಲಿ ಕೊಟ್ಟಿರುವಂತಹ ಸಲಹೆ ಪ್ರಕಾರ ಹೋಗುವುದಕ್ಕೆ ಸರ್ಕಾರ ಸಿದ್ಧವಿದೆ ಎಂದು ನಾನು ಹೇಳುತ್ತೇನೆ.

+ಶ್ರೀಮತಿ ಪ್ರಮಿಳಾ ನೇಸರ್ಗಿ (ಚಾಮರಾಜಪೇಟೆ):- ಮಾನ್ಯ ಮುಖ್ಯಮಂತ್ರಿಗಳು ಇದುವರೆಗೆ ಮಾತನಾಡಿದ್ದನ್ನು ನಾನು ಕೇಳಿದ್ದೇನೆ. ಮೂಲಭೂತವಾಗಿ ಅವರು ಏತಕ್ಕೆ ಮುಷ್ಕರ ಮಾಡಿದ್ದಾರೆ ಎಂಬುದನ್ನು ಅವರು ಹೇಳಿದರು. ತಾವು ಹೇಳಿದ್ದಿರಿ, ಹೈಕೋರ್ಟ್ ಜಡ್ಜ್‌ಮೆಂಟಿನ ಮಿಸಲೇನಿಯಸ್ ಫಸ್ಟ್ ಅಪೀಲ್‌ನಲ್ಲಿ ಸಿಂಗಲ್ ಜಡ್ಜ್, ಜಡ್ಜ್‌ಮೆಂಟ್ ಕೊಟ್ಟರು. ಅವರು ಒಂದು ಕಾಮನ್ ಜನರಲ್ ಸ್ಟೇಟ್‌ಮೆಂಟ್ ಮಾಡಿದರು. ಅಷ್ಟನ್ನು ಮಾತ್ರ ಮಾಡಿದ್ದರೆ ಅದರಿಂದ ಏನೂ ಆಗುತ್ತಿರಲಿಲ್ಲ. ಆದರೆ ಡ್ರೈವರ್‌ಗಳು ಏನಾದರೂ ಆಕ್ಸಿಡೆಂಟ್ಸ್ ಮಾಡಿದರೆ ಅವರ ಸಂಬಳವನ್ನು ಕಡಿತಗೊಳಿಸಬೇಕು ಎಂದಾಗ ಎಲ್ಲಾ ಡ್ರೈವರ್‌ಗಳಿಗೂ ವಾಹನ ಚಾಲನೆ ಮಾಡುವುದಕ್ಕೆ ಹೆದರಿಕೆಯಾಗುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಇದರ ಬಗ್ಗೆ ತಾವು ಏನಾದರೂ ಕ್ರಮ ತೆಗೆದುಕೊಂಡು ಆ ಜಡ್ಜ್‌ಮೆಂಟ್ ಬಂದ ತಕ್ಷಣ ರಿವ್ಯೂ ಮಾಡಬೇಕಾಗಿತ್ತು. ಹೋಗಲಿ ಸುಪ್ರೀಂ ಕೋರ್ಟ್‌ಗಾದರೂ ಹೋಗಬೇಕಾಗಿತ್ತು. ಏಕೆಂದರೆ ಕಾರ್ಮಿಕರ ಹಿತರಕ್ಷಣೆ ಮಾಡುವುದಕ್ಕೋಸ್ಕರ ಸುಪ್ರೀಂ ಕೋರ್ಟ್‌ಗೆ ಹೋಗಬೇಕಾಗಿತ್ತು. ಅದನ್ನೂ ಕೂಡ ತಾವು

ಮಾಡಲಿಲ್ಲ. ಎಕ್ಸ್‌ಪಂಜ್ ಮಾಡುವಂತಹ ಕೆಲಸವನ್ನೂ ಕೂಡ ತಾವು ಮಾಡಲಿಲ್ಲ. ಈಗ ಪ್ರತಿಯೊಬ್ಬ ಡ್ರೈವರ್ ಮನಸ್ಸಿನಲ್ಲಿ ಈ ಜಡ್ಜ್‌ಮೆಂಟ್ ಇರುವುದರಿಂದ ನಾನು ಹೇಗೆ ಡ್ರೈವರ್ ಮಾಡಲಿ ಎನ್ನುವಂತಹ ಪರಿಸ್ಥಿತಿ ಉದ್ಭವಿಸಿದೆ. ಅದಕ್ಕೋಸ್ಕರ ಈ ಮುಷ್ಕರವಾಗಿದೆ ಎಂಬುದೂ ಕೂಡ ತಮಗೆ ಗೊತ್ತಿದೆ. ದಯವಿಟ್ಟು ಇದನ್ನು ಸುಪ್ರೀಂ ಕೋರ್ಟಿಗೆ ಹಾಕಿ. ಯಾರಾದರೂ ಅಪಘಾತ ಮಾಡಿದರೆ ನೀವು ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಆದರೆ ಆಕ್ಸಿಡೆಂಟ್ ಆದ ತಕ್ಷಣ ಆ ಡ್ರೈವರನ್ನು ತಕ್ಷಣ ಸಸ್ಪೆನ್ಸ್‌ಷನ್‌ನಲ್ಲಿಡಬೇಕು, ಆ ಡ್ರೈವರ್ ಸಂಬಳದಲ್ಲಿ ಹಣವನ್ನು ಕಡಿತಗೊಳಿಸಬೇಕು ಎಂಬುದು ಸರಿಯಲ್ಲ. ಇವತ್ತು ನಾನು ನಿಮ್ಮನ್ನು ಕೇಳುತ್ತಿದ್ದೇನೆ, ಪ್ರೈವೇಟ್ ಬಸ್‌ಗಳಿಗಾದರೂ ಇನ್‌ಷೂರೆನ್ಸ್ ಇದೆ ಆದರೆ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಇನ್‌ಷೂರೆನ್ಸ್ ಇಲ್ಲ. ಇಂತಹ ಸಂದರ್ಭದಲ್ಲಿ ಆ ಡ್ರೈವರ್ ಮತ್ತು ಕಂಡಕ್ಟರ್‌ಗಳ ಸಂಬಳ ಹಿಡಿದುಕೊಳ್ಳುವಂತಹ ಸನ್ನಿವೇಶದಲ್ಲಿ ಅವರು ಹೇಗೆ ಹೋಗಬೇಕು, ಎಲ್ಲಿಗೆ ಹೋಗಬೇಕು. 30 ಸಾವಿರ ಡ್ರೈವರ್‌ಗಳ ಹಿತಚಿಂತನೆ ಮಾಡಬೇಕಾದುದೂ ತಮ್ಮ ಕರ್ತವ್ಯವಲ್ಲವೆ?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಕುರಿತಂತೆ ಅಡ್ವೋಕೇಟ್ ಬಳಿ ಲೀಗಲ್ ಒಪೀನಿಯನ್ ಕೇಳಿದ್ದೇನೆ. ಮುಂದೆ ಅವರು ಸುಪ್ರೀಂ ಕೋರ್ಟ್‌ಗೆ ಹೋಗಬೇಕೇ ಅಥವಾ ಬೇರೆ ಯಾವ ಕೋರ್ಟಿಗೆ ಯಾವ ರೀತಿಯಲ್ಲಿ ಹೋಗಬೇಕು ಎಂಬುದಲ್ಲ. ತಾವು ಇಷ್ಟೊಂದು ಅನುಭವಸ್ಥರು, ಕಾನೂನು ತಜ್ಞರಾಗಿರುವುದರಿಂದ ಹೈಕೋರ್ಟ್ ತೀರ್ಮಾನದಂತೆ ರ್‍ಯಾಶ್ ಮತ್ತು ನೆಗ್ಲಿಜೆಂಟ್ ಡ್ರೈವಿಂಗ್‌ಗೆ ನಿಮಗೂ ಶಿಕ್ಷೆ ಇದೆ, ನಾನು ಮಾಡಿದರೆ ನನಗೂ ಶಿಕ್ಷೆ ಇದೆ. ಅವರು ಏನು ಹೇಳುತ್ತಾರೆ ಎಂದರೆ ಈ ರೀತಿ ಇಂತಹ ಘಟನೆಗಳು ನಡೆಯಲು ಕಾರಣವೇನೆಂದರೆ ನೋ ಎಂಟ್ರಿ ಇರುವ ಕಡೆ ಹೋಗುವುದು, ಅಲ್ಲಿ ಯಾರಾದರೂ ಒಬ್ಬರು ಸಾಯುವುದು ಅಥವಾ ಯಾರದೋ ಮನೆಯ ಹತ್ತಿರ ಬಸ್ ನಿಲ್ಲಿಸಿ ರಿವರ್ಸ್ ತೆಗೆದುಕೊಳ್ಳಲು ಪ್ರಯತ್ನಿಸುವಾಗ ಅಲ್ಲಿ ಸಣ್ಣ ಮಗು ಇದ್ದರೆ ಆ ಮಗುವಿನ ಮೇಲೆ ಬಸ್ ಬಿಡುವುದು, ಇಂಥವುಗಳನ್ನು ಕೋರ್ಟಿನ ಗಮನಕ್ಕೆ ತಂದಾಗ ಅವರು ಕೋಪಗೊಂಡು ಈ ರೀತಿ ಬರೆದರು. ಇದು ನಮ್ಮ ತೀರ್ಮಾನವಲ್ಲ. ಅವರು ಆ ರೀತಿ ಬರೆದಾಗ Rash and Negligent driving, in the event of death, everybody will be punished, not necessarily KSRTC. Even private Driver also, he will be punished. ಈ ರೀತಿ ಶಿಸ್ತನ್ನು ತರಬೇಕೆಂದು ಹೈಕೋರ್ಟ್ ಅಭಿಪ್ರಾಯ ಪಟ್ಟಿತು. ಈ ರೀತಿ ಅಭಿಪ್ರಾಯ ಕೊಟ್ಟ ಕೂಡಲೇ ಸೀಟಿ ಹೊಡೆದು ಬಸ್‌ಗಳನ್ನು ನಿಲ್ಲಿಸಿಬಿಡುವುದೆ?

ಶ್ರೀಮತಿ ಪ್ರಮಿಳಾ ನೇಸರ್ಗಿ:- ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ ಎಂದು ನೀವೇ ಹೇಳಿ. ನೀವು ಇಂಪ್ಲಿಮೆಂಟ್ ಮಾಡಲಿಲ್ಲ ಎಂದರೆ ನಾವು ಅದನ್ನು ಕೇಳುವುದಕ್ಕಾಗುವುದಿಲ್ಲ. ಹಾಗೆ ಕೇಳಿದರೆ ಅದು ಕಂಟೆಮ್ಪ್ಟ್ ಆಫ್ ದಿ ಕೋರ್ಟ್ ಆಗುತ್ತದೆ. ಅದಕ್ಕೆ ನಾನು ಹೇಳುತ್ತೇನೆ, it is a matter where, you have to file a review petition, ರಿವ್ಯೂ ಮಾಡಿ ಜನರಲೈಜೇಷನ್ ತಪ್ಪು ಎಂದು ಅದನ್ನು ಎಕ್ಸ್‌ಪೇಂಜ್ ಮಾಡಬೇಕು.

ಇಲ್ಲದಿದ್ದರೆ ಸುಪ್ರೀಂ ಕೋರ್ಟಿಗೆ ಹಾಕಿ ಆ ಅಬ್ಸರ್ವೇಷನ್ನನ್ನು ತೆಗೆದು ಹಾಕಬೇಕು. ಈ ಜನರಲೈಜೇಷನ್ನನ್ನು ಪ್ರತಿಯೊಬ್ಬರ ಮೇಲೂ ಕೂಡ ಮಾಡಬೇಕು ಎಂಬುದನ್ನು ಯಾವ ಕೋರ್ಟ್ ಕೂಡ ಒಪ್ಪುವುದಿಲ್ಲ. ಯಾವುದೋ ಒಂದು ಕೇಸ್‌ನಲ್ಲಿ ಯಾರೋ ಒಬ್ಬ ಡ್ರೈವರ್ ಮಾಡಿದರೆ ಅದಕ್ಕೆ ಎಲ್ಲಾ ಡ್ರೈವರ್‌ಗಳೂ ಕಾರಣ, ಅವರೆಲ್ಲರಿಗೂ ಶಿಕ್ಷೆಯಾಗಬೇಕು ಎಂಬುದನ್ನು ಯಾವ ಕೋರ್ಟ್ ಕೂಡ ಒಪ್ಪುವುದಿಲ್ಲ. ಈ ಜಡ್ಜ್‌ಮೆಂಟ್ ಆಗಿ ಈಗಾಗಲೇ ಆರು ತಿಂಗಳಾಯಿತು. ಇದು ಅಕ್ಟೋಬರ್‌ನಲ್ಲಿ ಆದಂತಹ ಜಡ್ಜ್‌ಮೆಂಟ್ ಇವತ್ತಿನವರೆಗೂ ಕೂಡ ಈ ಬಗ್ಗೆ ಗಮನ ಹರಿಸಿಲ್ಲ.

ಶ್ರೀ ಎಂ.ಪಿ. ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೆ, ಇದು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಆಗಿರುವುದರಿಂದ ಮಾನ್ಯ ಸದಸ್ಯರೇ ಕೋರ್ಟಿಗೆ ಹೋಗಬಹುದಾಗಿತ್ತು. ಅಥವಾ ಡ್ರೈವರ್‌ಗಳ ಸಂಘಟನೆಗಳಾದ ಟ್ರೇಡ್ ಯೂನಿಯನ್ ವತಿಯಿಂದಲೇ ಕೋರ್ಟಿಗೆ ಹೋಗಬಹುದಾಗಿತ್ತು.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ:- ಇದು ಒಂದು Miscellaneous First Appeal ನಲ್ಲಿ ಆಗಿರತಕ್ಕಂಥ ಜಡ್ಜ್‌ಮೆಂಟ್. Miscellaneous First Appeal ಆಗಿರುವುದರಿಂದ ರಿಟ್ ಅಪೀಲ್ ಹೈಕೋರ್ಟ್‌ಗೆ ಹಾಕುವುದಕ್ಕೆ ಬರುವುದಿಲ್ಲ. The only remedy is, you have to file an SLP. ಹಾಕಿ ಎಕ್ಸ್‌ಪಂಜ್ ಮಾಡಬೇಕು. ಡ್ರೈವರ್‌ಗಳ ಹಿತರಕ್ಷಣೆ ಮಾಡಬೇಕಾಗಿದ್ದರೆ ಇದನ್ನೂ ಮಾಡಬೇಕಾಗಿತ್ತು. ಸರಕಾರ ಇದುವರೆಗೂ ಕೂಡ ಮಾಡಿಲ್ಲ. ಅದರಿಂದಾಗಿ ಈ ಪರಿಸ್ಥಿತಿಯು ಉದ್ಭವವಾಗಿದೆ. ಆರು ತಿಂಗಳುಗಳಿಂದ ಸರ್ಕಾರ ಸುಮ್ಮನೆ ಕುಳಿತಿರುವುದರಿಂದ ಈ ರೀತಿಯ ಪರಿಸ್ಥಿತಿಯು ಆಗಿದೆ. ಅವರುಗಳನ್ನು ಕರೆದು ಸರಕಾರದವರು ತತ್‌ಕ್ಷಣ ಒಂದು ಎಸ್‌ಎಲ್‌ಪಿ ಹಾಕಿ.

ಅಧ್ಯಕ್ಷರು:- ಮೇಡಂರವರೇ, ತಾವುಗಳು ಹೇಳುವುದು ನಿಜ. ಹೈಕೋರ್ಟ್‌ನಲ್ಲಿ ರಿಟ್ ಅಪೀಲ್ ಬರುವುದಿಲ್ಲ. ಟ್ರೇಡ್ ಯೂನಿಯನ್‌ರವರು, ಮ್ಯಾನೇಜ್‌ಮೆಂಟ್‌ಗೆ ಒಂದು ರೆಪ್ರಸೆಂಟೇಷನ್ ಕೊಟ್ಟು, ಈ ತರಹ ಅಬ್‌ಸರ್‌ವೇಷನ್ ಮಾಡಿದ್ದಾರೆ, ನಮಗೆಲ್ಲಾ ಆತಂಕವಾಗಿದೆ, ನೀವು ಕ್ರಮ ತೆಗೆದುಕೊಳ್ಳಿ, ಮ್ಯಾನೇಜ್‌ಮೆಂಟ್ ಪರವಾಗಿ ಸುಪ್ರೀಂಕೋರ್ಟ್‌ಗೆ ಹೋಗಿ ಸ್ಪೆಷಲ್ ರಿಟ್ ಪಿಟಿಷನ್ ಹಾಕಿ ಎಂದು ಕೇಳಿಕೊಂಡಾಗ, ಇವರು ನಾವು ಹಾಕುವುದಿಲ್ಲ ಎಂದು ಹೇಳಿದರೆ ಸ್ಟ್ರೈಕ್ ಮಾಡುವುದು ಸರಿ. ಹೌದೋ ಅಲ್ಲವೋ? Going by your logic....

ಶ್ರೀಮತಿ ಪ್ರಮೀಳಾ ನೇಸರ್ಗಿ:- ಇದು ಅಕ್ಟೋಬರ್ ತಿಂಗಳಲ್ಲಿ ಆಗಿದ್ದುದು ಈಗ ನಾವು ಮಾರ್ಚ್‌ನಲ್ಲಿದ್ದೇವೆ. ರಿಟ್‌ಪಿಟೀಷನ್ 3 ತಿಂಗಳೊಳಗಾಗಿ ಹಾಕಬೇಕಾಗಿತ್ತಲ್ಲವೇ?

ಅಧ್ಯಕ್ಷರು:- ನಾನು ತಮ್ಮನ್ನು ಕೇಳುತ್ತಾ ಇದ್ದೇನೆ. Going by own logic, when there is no provision for writ appeal in the High Court, has the trade union made any representation to the management seeking their indulgence to prefer an appeal by way of an SLP before the Supreme

Court and if the management has turned down that request, they are very much within their rights, entitled to resort to agitation.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಯೂನಿಯನ್‌ನವರು ರೆಕಗ್ನೈಸ್ ಮಾಡಬೇಕಾಗಿಲ್ಲ. ಇಡೀ ಕಾರ್ಮಿಕರ ವರ್ಗಕ್ಕೆ, 30 ಸಾವಿರ ಡ್ರೈವರ್‌ಗಳಿಗೆ ಅಫೆಕ್ಟ್ ಆದಾಗ it is the duty of the Government to take them.

ಅಧ್ಯಕ್ಷರು:- ಅಗ್ರೀವ್ಡ್ ಪಾರ್ಟಿ ಯಾರು? You are an Advocate. In the instant case, who is the aggrieved party? Who should seek relief?

Smt. Pramila Nesargi:- Miscellaneous First Appeal ನಲ್ಲಿ ಅವರು ಪಾರ್ಟಿ ಬರುವುದಿಲ್ಲ.

ಅಧ್ಯಕ್ಷರು:- ಅಗ್ರೀವ್ಡ್ ಪಾರ್ಟಿ ಯಾರು? ಅಗ್ರೀವ್ಡ್ ಪಾರ್ಟಿ, ಯಾರಿಗೆ ರಿಲೀಫ್ ಬೇಕೋ ಅವರು ರೆಪ್ರಸೆಂಟೇಷನ್ ಕೂಡ, ಕೊಟ್ಟಿದ್ದಾರೋ ಇಲ್ಲವೋ ಎಂದೂ ಕೂಡ ತಿಳಿದುಕೊಳ್ಳಲಾರದೆ,.....

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಹೈಕೋರ್ಟ್‌ನವರು ಫೆಬ್ರವರಿ ತಿಂಗಳಲ್ಲಿ ಸರಕಾರದ ಗಮನಕ್ಕೆ ತಂದಿದ್ದಾರೆ. ಸೆಪ್ಟೆಂಬರ್‌ನಲ್ಲಿ ಈ ಜಡ್ಜ್‌ಮೆಂಟ್ ಆಗಿರುವುದು. ಫೆಬ್ರವರಿಯಲ್ಲಿ ನಮ್ಮ ಸರಕಾರಕ್ಕೆ ಪತ್ರ ಬಂದಿರುವುದು. ಕೆಎಸ್‌ಆರ್‌ಟಿಸಿ ಮ್ಯಾನೇಜ್‌ಮೆಂಟ್‌ಗೆ ಏನೂ ಸಂಬಂಧವಿಲ್ಲ. ಬಂದ ನಂತರ ಮಾರ್ಚ್ 9ನೇ ತಾರೀಖು ಗೃಹಕಾರ್ಯದರ್ಶಿಗಳು ಸಭೆ ಕರೆದಿದ್ದಾರೆ. ಅದನ್ನೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದುದು. ಇದನ್ನು ಇಂಪ್ಲಿಮೆಂಟ್ ಮಾಡಲು ಆಗುತ್ತದೆಯೋ ಇಲ್ಲವೋ ಎಂಬ ಬಗ್ಗೆ ವಿಚಾರ ಮಾಡಬೇಕೆಂದು ಹೇಳಿದ್ದರು. ಹೀಗೆಲ್ಲಾ ಇರುವಾಗ ಹಠಾತ್ ಆಗಿ, ಸುಮ್ಮನೆ ಏನೂ ಕಾರಣಗಳಿಲ್ಲದೆ ಹೊರಟು ಹೋಗಿ ಬಿಟ್ಟರೆ.......

ಶ್ರೀಮತಿ ಪ್ರಮೀಳಾ ನೇಸರ್ಗಿ:- ಈಗಲಾದರೂ ರಿವ್ಯೂ ಹಾಕುತ್ತೀರೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇವರ ಆರ್ಗ್ಯೂಮೆಂಟ್ ನೋಡಿದರೆ ವಿರೋಧಪಕ್ಷದ ನಾಯಕರು ಮತ್ತು ಎಲ್ಲಾ ಫ್ಲೋರ್ ಲೀಡರ್ಸ್‌ಗಳು, ಡ್ರೈವರ್ ಪರವಾಗಿ ಆರ್ಗ್ಯೂಮೆಂಟ್ ಮಾಡಲು ಬಂದಿದ್ದಾರೆ ಎಂಬ ಅಭಿಪ್ರಾಯ ಬರುತ್ತದೆ. ಮಾನ್ಯ ಮುಖ್ಯಮಂತ್ರಿಯವರು ತೊಗರಿಬೆಳೆ, ಭೂಕಂಪ, ಮುಂತಾಗಿ ಮಾತನಾಡುವುದನ್ನು ನೋಡಿದರೆ, ಬಾಕಿಯವರಿಗೆ ಯಾವ ಇಂಟ್ರೆಸ್ಟ್ ಇಲ್ಲ, ಅವರು ಹೇಳುವುದೇ ಸತ್ಯ ಎಂಬ ಧಾಟಿಯಲ್ಲಿ ಹೇಳುತ್ತಾ ಇದ್ದಾರೆ. ನಾವು ಇಲ್ಲಿ ಪ್ರಸ್ತಾಪ ಮಾಡಿದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಮಕ್ಕಳ ಎಕ್ಸಾಮಿನೇಷನ್ ದೃಷ್ಟಿಯಿಂದ. ಅವರಿಗೆ ಪರೀಕ್ಷೆಗಳಿಗೆ ಹೋಗಲು ಏನು ತೊಂದರೆಯಾಗುತ್ತಾ ಇದೆ, ಅದಕ್ಕೆ ಯಾವ ರೀತಿಯ ಪರಿಹಾರವನ್ನು ಕಂಡುಹಿಡಿಯುತ್ತೀರಿ ಮತ್ತು ಆಲ್ಟರ್‌ನೇಟ್ ಅರೇಂಜ್‌ಮೆಂಟ್ ಏನು ಮಾಡುತ್ತೀರಿ ಎಂಬ ಮಾತುಗಳು ಇಲ್ಲಿ ಪ್ರಸ್ತಾಪ ಆದುವು. ಆದ್ದರಿಂದ ಆ ಸ್ಟ್ರೈಕ್‌ನ್ನು ವಿಥ್‌ಡ್ರಾ ಮಾಡಲು ನೀವು ಎಲ್ಲಾ ಪ್ರಯತ್ನಗಳನ್ನು ಮಾಡಬೇಕು,

ಎರಡು ವರ್ಷಗಳಿಂದ ಇದು ಏತಕ್ಕೆ ಹೀಗೆ ಆಗುತ್ತಾ ಇದೆ, ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆಯೇ ಹೊರತಾಗಿ, ಬೇರೆ ಏನೂ ಇಲ್ಲ. ಯಾರ ಪರವಾಗಿ ಯಾರೂ ಕೂಡ ಮಾತನಾಡ ಬೇಕಾಗಿಲ್ಲ. ಇಲ್ಲಿ ಎಲ್ಲರೂ ಕೂಡ ಸಾರ್ವಜನಿಕರ ಪರವಾಗಿ ಮಾತನಾಡಲು ಬಂದಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್:- ನಾನು ಹೇಳದೇ ಇದ್ದುದನ್ನು ಹೇಳಿದ್ದೇನೆ ಎಂದು ನನ್ನ ಎದುರೇ ಹೇಳುವುದಕ್ಕೆ ಆಗುತ್ತದೆಯೇ?.......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅವರು ಹೇಳಿದ್ದಾರೆ, ತೊಗರಿ ಬೆಳೆ, ಭೂಕಂಪ, ಹೆಚ್ಚು ಮಳೆ, ಕಡಿಮೆ ಮಳೆ, ಮುಂತಾಗಿ ಹೇಳಿ ಎಲ್ಲದಕ್ಕೂ ನಾವೇ ಕಾರಣ ಎಂದು ಹೇಳಿದರೆ ಹೇಗೆ ಎಂದು ಮಳೆ ಹೆಚ್ಚು ಬಂದು ನಷ್ಟವಾದರೆ, ಅದಕ್ಕೆ ಪರಿಹಾರ ಕೊಡಲಿಲ್ಲ ಅಂದರೆ ನೀವೇ ಕಾರಣರು. ತೊಗರಿ ಬೆಳೆಗೆ ಕೀಟಗಳಿಂದ ನಷ್ಟ ಉಂಟಾದರೆ, ಅದಕ್ಕೂ ಪರಿಹಾರ ಕೊಡದಿದ್ದರೆ ನೀವೇ ಕಾರಣರಾಗುತ್ತೀರಿ. ಯಾವುದಕ್ಕೆ ನೀವು ಕಾರಣರಾಗುತ್ತೀರಿ, ಆ ಕಾರಣವನ್ನು ಮಾತ್ರ ನಾವು ಹೇಳಬಹುದೇ ಹೊರತಾಗಿ, ಬಾಕಿ ಎಲ್ಲದಕ್ಕೂ ನೀವೇ ಕಾರಣರು ಎಂದು ನಾವು ಹೇಳುವುದಿಲ್ಲ. ಆದ್ದರಿಂದ ದಯಮಾಡಿ ಹಾಗೆ ಹೇಳಬೇಡಿ. ದಯಮಾಡಿ ಈ ಸಮಸ್ಯೆಗೆ ಪರಿಹಾರವನ್ನು ಕಂಡು ಹಿಡಿಯಿರಿ. ಎರಡನೆಯದಾಗಿ ಈಗ ಏಳನೇ ಕ್ಲಾಸ್‌ಗೆ ಪಬ್ಲಿಕ್ ಎಕ್ಸಾಮಿನೇಷನ್ ಪ್ರಾರಂಭವಾಗಿದೆ. ಇವತ್ತು ಪರೀಕ್ಷೆ ಪ್ರಾರಂಭವಾಗಿದ್ದು, ಬಸ್ ಮುಷ್ಕರ ಕೂಡ ಮುಂದುವರಿದಿದೆ. ಆದ್ದರಿಂದ ಕನಿಷ್ಟಪಕ್ಷ ಸ್ಟ್ರೈಕ್ ಮುಗಿಯುವವರೆಗೆ ಈ ಪರೀಕ್ಷೆಯನ್ನಾದರೂ ಮುಂದಕ್ಕೆ ಹಾಕಿ.

ಅಧ್ಯಕ್ಷರು:- ಅದೊಂದೇ ಅಲ್ಲ, ಸಿಬಿಎಸ್‌ಸಿ, ಐಸಿಎಸ್‌ಸಿ, ಪರೀಕ್ಷೆಗಳೂ ಕೂಡ ಇವೊತ್ತಿನಿಂದ ಪ್ರಾರಂಭ. ಹೀಗೆ ಬಹಳ ಪರೀಕ್ಷೆಗಳು ಇವತ್ತೇ ಪ್ರಾರಂಭವಾಗಿವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದಕ್ಕಾಗಿ ದಯಮಾಡಿ ಸರಕಾರದವರು ಎಕ್ಸಾಮಿನೇಷನ್‌ಗಳನ್ನು ಮುಂದಕ್ಕೆ ಹಾಕಲು ಕ್ರಮ ತೆಗೆದುಕೊಳ್ಳಬಹುದಲ್ಲಾ?

ಅಧ್ಯಕ್ಷರು:- ಅದನ್ನೆಲ್ಲಾ ಹೇಗೆ ಮಾಡಲು ಬರುತ್ತದೆ? ಸಿಬಿಎಸ್‌ಸಿ, ಐಸಿಎಸ್‌ಸಿ, ಮುಂತಾದ ಪರೀಕ್ಷೆಗಳು.... They are conducted by Central Government.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಏಳನೇ ಕ್ಲಾಸ್ ಪರೀಕ್ಷೆಯಾದರೂ ನಿಮ್ಮ ಕೈಯಲ್ಲಿ ಇರತಕ್ಕಂಥಾದ್ದು.... ಹೀಗೆ ಯಾವುದಾದರೂ ಇಲ್ಲ ಅಂದರೆ ಮಕ್ಕಳು ಏನು ಮಾಡಬೇಕು? ನಾಳೆ ಅವರು ಫೇಲಾದರೆ ಇಡೀ ಒಂದು ವರ್ಷದ ಓದೆಲ್ಲಾ ಅವರಿಗೆ ನಷ್ಟವಾಗಿ ಅವರು ಒಂದು ವರ್ಷ ಮನೆಯಲ್ಲಿಯೇ ಕುಳಿತುಕೊಳ್ಳಬೇಕಾಗುತ್ತದೆ. ಬುದ್ಧಿವಂತ ಮಕ್ಕಳಿಗೂ ಈ ಅನಾನುಕೂಲವಾಗುತ್ತದೆ. ಓದದೇ ಇದ್ದ ಮಕ್ಕಳ ವಿಚಾರವು ಬೇರೆ. ಕಡಿಮೆ ಪಕ್ಷ ಇದರ ಬಗ್ಗೆಯಾದರೂ ಒಂದು ನಿಲುವನ್ನು ತೆಗೆದುಕೊಳ್ಳಬೇಕಲ್ಲವೇ? ನಿಮ್ಮ ಕೈಯಲ್ಲಿ ಯಾವ ವಿಚಾರ ಇಲ್ಲ, ಅದರ ಬಗ್ಗೆ ನೀವು ಬೇಕಾದರೆ ಬರೆಯಿರಿ. ಆದರೆ ಯಾವುದು ಸಾಧ್ಯವಿದೆಯೋ ಅದನ್ನು ಮಾಡಲು ಸರಕಾರಕ್ಕೆ ಇರುವ ತೊಂದರೆಯಾದರೂ ಏನು? ದಯಮಾಡಿ ವಿಚಾರ ಮಾಡಿ.........

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯಮಂತ್ರಿಯವರು ಒಂದು ಭರವಸನೆಯನ್ನು ಕೊಟ್ಟರು. ಹೊರಗಡೆ ಚಳುವಳಿ ಮಾಡುತ್ತಿರತಕ್ಕಂಥ ನೌಕರರು ನಿಲ್ಲಿಸಲಿ, ನಿಲ್ಲಿಸದೇ ಇರಲಿ ನಾನು ಕರೆದು ಮಾತನಾಡಿಸುತ್ತೇನೆ ಎಂದಿದ್ದಾರೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ಇವತ್ತು ಸಂಜೆ ತಮ್ಮ ನಾಯಕತ್ವದಲ್ಲಿ ಒಂದು ಸಭೆ ಕರೆದು ಬಿಡಿ. ಈ ಸಮಸ್ಯೆ ಬಗೆಹರಿಯಲಿ......

ಶ್ರೀ ಜೆ.ಹೆಚ್. ಪಟೇಲ್:- ಮುಷ್ಕರವನ್ನು ಅವರು ನಿಲ್ಲಿಸಲಿ ನಿಲ್ಲಿಸದೇ ಇರಲಿ, ಬರಲಿ ಮಾತನಾಡುತ್ತೇನೆ ಅಂದರೆ ಏನು ಅರ್ಥ? ಇದನ್ನು ಇಂಗ್ಲೀಷ್‌ನಲ್ಲಿ ಹೇಳಲೇ? ಅವರು ಮುಷ್ಕರ ನಿಲ್ಲಿಸಲಿ, ನಿಲ್ಲಿಸದೇ ಇರಲಿ ಬಂದರೆ ಅವರ ಹತ್ತಿರ ಮಾತನಾಡುತ್ತೇನೆ ಎಂದು ನಾನು ಹೇಳಿದ್ದನ್ನು ತಾವೇ ಕೇಳಿದ್ದೀರಿ. ಮತ್ತೆ ಇನ್ನೇನು ಬೇಕು?

ಶ್ರೀ ವಾಟಾಳ್ ನಾಗರಾಜ್:- ಇವೊತ್ತು ಸಂಜೆ 6 ಗಂಟೆಗೆ ತಮ್ಮನ್ನು ಭೇಟಿ ಮಾಡಿಸೋಣವೇ?

ಅಧ್ಯಕ್ಷರು:- ಪರೀಕ್ಷೆ ವಿಚಾರಕ್ಕೆ ಗೋವಿಂದೇಗೌಡರು ಏನು ಹೇಳುತ್ತಾರೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇವತ್ತು ಮಕ್ಕಳು ಪರೀಕ್ಷೆಗೆ ಹೋಗಬೇಕು. ಸಾರಿಗೆ ಸೌಲಭ್ಯವಿಲ್ಲದೆ ಮಕ್ಕಳು ಪರೀಕ್ಷೆಗೆ ಹೋಗುವುದು ಹೇಗೆ?

ಅಧ್ಯಕ್ಷರು:- ಇವತ್ತು ಪರೀಕ್ಷೆ ಪ್ರಾರಂಭವಾಗಿದೆ. ಇಂದಿನ ಪೇಪರ್ ಆಗಿಹೋಗುತ್ತದೆ. ಇವತ್ತಿನ ಪರಿಸ್ಥಿತಿಯನ್ನು ನೋಡಿಕೊಂಡು, ಸ್ಟ್ರೈಕ್ ಏನಾಗುತ್ತದೆ ಎಂಬುದನ್ನು ನೋಡಿಕೊಂಡು ಸಾಯಂಕಾಲ ಪರಿಸ್ಥಿತಿಯನ್ನು ಪರಾಮರ್ಶಿಸಿ It the situation wants Government will take right decision. ಅದನ್ನು ಬಿಟ್ಟು ಬೇರೆ ಏನು ಮಾಡುವುದಕ್ಕಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇವತ್ತು ಪರೀಕ್ಷೆಗೆ ಹೋಗಲಾರದಂಥ ಮಕ್ಕಳಿಗೆ ತೊಂದರೆಯಾಯಿತಲ್ಲವೇ?

Mr. SPEAKER:- That's exactly what I am telling. ಒಂದು ವೇಳೆ ಇವೊತ್ತು ಸ್ಟ್ರೈಕ್ ಮುಂದುವರಿದು ಪರೀಕ್ಷೆಗೆ ಹೋಗುವ ಮಕ್ಕಳಿಗೆ ತೊಂದರೆಯಾಗಿರುವುದು ಸರಕಾರದ ಗಮನಕ್ಕೆ ಬಂದರೆ, ನಾಳೆಗೆ ಸರಕಾರದವರು ತಮ್ಮ ಜವಾಬ್ದಾರಿಗನುಗುಣವಾಗಿ ಒಂದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, What about today's paper? ಇವತ್ತು ಪರೀಕ್ಷೆಗೆ ಹೋಗದ ವಿದ್ಯಾರ್ಥಿಗಳ ಪರಿಸ್ಥಿತಿ ಏನು? ಇವತ್ತು 25 ಪರ್‌ಸೆಂಟ್ ವಿದ್ಯಾರ್ಥಿಗಳು ಹೋಗಿಲ್ಲ ಎಂದು ಇಟ್ಟುಕೊಳ್ಳಿ, ಅವರ ಗತಿ ಏನು?

ಅಧ್ಯಕ್ಷರು:- ನಾನೂ ಕೂಡ ಅದನ್ನೇ ಹೇಳಿರುವುದು. ಇವತ್ತಿನ ದಿನವನ್ನೂ ಸೇರಿ ಏನೋ ಒಂದು ತೀರ್ಮಾನವನ್ನು ಅವರು ತೆಗೆದುಕೊಳ್ಳುತ್ತಾರೆ. Should they say that in so many words. Afterall, the information.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, Naturally we want the assurance. So many words...... ಅಂದರೆ ಹೇಗೆ?

MR. SPEAKER:- The Government is awaiting the information by evening. ಇವತ್ತು ಕೆಲವು ಮಕ್ಕಳಿಗೆ ಪರೀಕ್ಷೆಗೆ ಹೋಗಲು ಆಗಿರಲಾರದು ಎಂಬ ವರ್ತಮಾನಗಳು ಅವರ ಗಮನಕ್ಕೆ ಬರಲಿ. ಹೋಗದವರು ಹೋಗಲಿ ಎಂದು ಯಾವ ಜವಾಬ್ದಾರಿ ಸರಕಾರದವರೂ ಹೇಳುವುದಿಲ್ಲ. They are hoping that things would improve.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದೇನೂ ಬಹಳ ಕಷ್ಟದ ಕೆಲಸವಲ್ಲ. ವ್ಯವಸ್ಥೆ ಮಾಡಲು ಆಗದಿದ್ದರೆ ಪರೀಕ್ಷೆಯನ್ನಾದರೂ ಒಂದೆರಡು ದಿನಗಳ ಮಟ್ಟಿಗೆ ಮುಂದಕ್ಕೆ ಹಾಕಲಿ.

ಅಧ್ಯಕ್ಷರು:- ಶಿಕ್ಷಣ ಸಚಿವರು ಆ ಬಗ್ಗೆ ಹೇಳಿ.....

ಶ್ರೀ ವಾಟಾಳ್ ನಾಗರಾಜ್:- ಶಿಕ್ಷಣ ಸಚಿವರು ಸದನದಲ್ಲಿ ಒಂದು ಭರವಸೆಯನ್ನು ಕೊಡಿ. ಪರೀಕ್ಷೆಗೆ ಎಷ್ಟು ಜನರು ಹೋಗಿದ್ದಾರೆ, ಎಷ್ಟು ಜನರು ಹೋಗಿಲ್ಲ ಎಂಬಿತ್ಯಾದಿ ವಿವರಗಳನ್ನು ಕೊಡಿ.

ಶ್ರೀ ಜೆ.ಹೆಚ್. ಪಟೇಲ್:- ಎಷ್ಟು ಸಾರಿ ಹೇಳಬೇಕು? ಸ್ಟ್ರೈಕ್ ನಡೆಯುತ್ತಾ ಇದೆ, ಅದಕ್ಕಾಗಿ ಎಕ್ಸಾಮಿನೇಷನ್ ಮುಂದಕ್ಕೆ ಹಾಕಲು ಬರುತ್ತದೆಯೇ? ಅದರಿಂದ ಬರುವ ಸಮಸ್ಯೆಗಳು ಯಾವುವು ಎಂದು ತಾವುಗಳು ವಿಚಾರ ಮಾಡುವುದಿಲ್ಲವೇ? ಅದು ಬಹಳವಿದೆ. ಅದಕ್ಕೋಸ್ಕರ ವಿವರಕ್ಕೆ ಹೋಗದೆ, ಸಾಯಂಕಾಲದ ತನಕ ನೋಡಿ, ಅವರು ಬಂದರೆ ಮಾತುಕತೆ ನಡೆಸಿ, ಅದು ಮುಗಿದರೆ ಮತ್ತೆ ಪರೀಕ್ಷೆ ಮಾಡುವ ವಿಚಾರವೇ ಬರುವುದಿಲ್ಲ. ಆದ್ದರಿಂದ ಸ್ವಲ್ಪ ಸಮಾದಾನ ಮಾಡಿಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್:- ಕಾರ್ಮಿಕರನ್ನು 6 ಗಂಟೆಗೆ ಕರೆಸೋಣವೇ?....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪರೀಕ್ಷೆಗಳು ಇರುವುದರಿಂದಾಗಿ ಈ ಸಂದಿಗ್ಧ ಪರಿಸ್ಥಿತಿಯು ಬಂದಿದೆ. ಇಲ್ಲವಾದಲ್ಲಿ ಬೇರೆ ಪ್ರಶ್ನೆ ಇರುತ್ತಿರಲಿಲ್ಲ.

ಶ್ರೀಎಂ.ಪಿ. ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಇವತ್ತಿನ ಪರೀಕ್ಷೆಯ ವಿಚಾರದಲ್ಲಿ ಮಕ್ಕಳಿಗೆ ಏನಾದರೂ ತೊಂದರೆಯಾಗಿದ್ದರೆ, ಸಾಯಂಕಾಲ ಅದರ ಬಗ್ಗೆಯೂ ಕೂಡ ಚರ್ಚೆ ಮಾಡಿ, ಆಗಿರತಕ್ಕಂಥ ವ್ಯವಸ್ಥೆಗೆ ಪರ್ಯಾಯವಾದಂಥ ವ್ಯವಸ್ಥೆಯನ್ನು ಮಾಡುತ್ತಾರೆ. ಮಾನ್ಯ ಮುಖ್ಯಮಂತ್ರಿಯವರು ಸಾಯಂಕಾಲ ಅವರ ಜೊತೆಗೆ ಮಾತನಾಡಿ ಫಲಶೃತಿಯಾಗಿ, ಮುಷ್ಕರವನ್ನು ವಾಪಸ್ ತೆಗೆದುಕೊಂಡರೆ, ಈ ಸಮಸ್ಯೆಯು ಬಗೆಹರಿದಂತೆ.

12.40 ಪಿ.ಎಂ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸಂಬಂಧಪಟ್ಟ ಶಿಕ್ಷಣ ಸಚಿವರು ಇಲ್ಲಿ ಇದ್ದಾರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದಾರೆ, ಆದರೂ ಇದಕ್ಕೆ ಏಕೆ ಉತ್ತರ ಸಿಗುವುದಿಲ್ಲವೋ